ELI_8_Creating a Print-rich-Environment-in-Classroom-1

# ತರಗತಿಯಲ್ಲಿ ಮುದ್ರಣ-ಸಮೃದ್ಧ ಪರಿಸರವನ್ನು ರೂಪಿಸುವುದು

ಆರಂಭಿಕ ಸಾಕ್ಷರತೆಯ ಉಪಕ್ರಮ
ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್, ಹೈದರಾಬಾದ್

**ಇಲ್ಲಿ ಕೆಳಗೆ ವಿವರಿಸಿದ ಒಂದನೇ ತರಗತಿಯ ದೃಶ್ಯವನ್ನು ಕಲ್ಪಿಸಿಕೊಳ್ಳಲು ಪ್ರಯತ್ನಿಸಿ.**

ತರಗತಿಯೊಳಗೆ ಪ್ರವೇಶಿಸುತ್ತಿದ್ದ ಹಾಗೆ ನಮಗೆ ಸಾಲು ಸಾಲು ಅಕ್ಷರಗಳ ಕಾರ್ಡುಗಳು, ಮಕ್ಕಳ ಕಲಾಕೃತಿಗಳು ತಾರಸಿಯಿಂದ ಇಳಿಬಿದ್ದಿರುವುದು ಕಾಣಸಿಗುತ್ತದೆ. ಕಪ್ಪುಹಲಗೆಯ ಒಂದು ಬದಿಯ ಮೇಲು ಭಾಗದಲ್ಲಿ ಶಾಲೆಯ ಪ್ರಾರ್ಥನೆ ಮತ್ತು ಇನ್ನೊಂದು ಬದಿಯಲ್ಲಿ ಅಷ್ಟೇ ಎತ್ತರದಲ್ಲಿ, ವರ್ಣಮಾಲೆಯಿದ್ದು, ಎರಡನ್ನೂ ಕಪ್ಪು ಬಣ್ಣದ ದಪ್ಪ ಅಕ್ಷರಗಳಲ್ಲಿ ತಿಳಿ ಹಳದಿ ಬಣ್ಣದ ಹಿನ್ನೆಲೆಯ ಮೇಲೆ ಚಿತ್ರಿಸಿರುವುದು ಕಾಣುತ್ತದೆ. ಉಳಿದ ಮೂರು ಗೋಡೆಗಳ ಮೇಲೆ ಶಿಶುಗೀತೆಗಳು/ಪದ್ಯಗಳ ಕೆಲವು ಚಾರ್ಟುಗಳು ಮತ್ತು ಸ್ಫೂರ್ತಿದಾಯಕ ಉದ್ಧರಣಗಳಿವೆ. ಹಿಂದಿನ ಭಾಷಾ ಶಿಕ್ಷಕರು ಕಳೆದ ವರ್ಷ ಈ ಚಾರ್ಟುಗಳನ್ನು ತಂದಿದ್ದರು. ಒಂದು ಜಾಗದಲ್ಲಿ ವಿದ್ಯಾರ್ಥಿಗಳ ನೋಟುಪುಸ್ತಕಗಳು ಮತ್ತು ಪಠ್ಯಪುಸ್ತಕಗಳನ್ನು ತೆರೆದ ಕಪಾಟಿನಲ್ಲಿ ಇಡಲಾಗಿದೆ. ಅವುಗಳ ಹಿಂದೆ ಒಂದೆರಡು ಮಕ್ಕಳ ಪುಸ್ತಕಗಳು ಮತ್ತು ದೊಡ್ಡ ಮಕ್ಕಳ ನಿಯತಕಾಲಿಕೆಗಳನ್ನು ಜೋಡಿಸಲಾಗಿದೆ. ಒಟ್ಟಾರೆ ಇದೊಂದು ಮಕ್ಕಳನ್ನು ಆಕರ್ಷಕ ವರ್ಣಮಯ ತರಗತಿಯಾಗಿದೆ.

**ನೀವು ಇದನ್ನು ಒಂದು ಮುದ್ರಣ-ಸಮೃದ್ಧ ತರಗತಿಯೆಂದು ಕರೆಯುವಿರಾ? ಏಕೆ ಅಥವಾ ಏಕೆ ಇಲ್ಲ?**ಈ ರೀತಿಯ ತರಗತಿಗಳನ್ನು ಹಲವು ಶಿಕ್ಷಕರು 'ಮುದ್ರಣ-ಸಮೃದ್ಧ' ಎಂದು ಭಾವಿಸುತ್ತಾರೆ. ಆದರೆ ಇವು ಹಾಗಿಲ್ಲ ಎಂದು ನಾವು ಯೋಚಿಸುತ್ತೇವೆ. ಏಕೆಂದರೆ ನೀವು ನಿಕಟವಾಗಿ ಗಮನಿಸಿದರೆ, ಇಲ್ಲಿ ಮುದ್ರಣವನ್ನು ಸಾಮಾನ್ಯವಾಗಿ ಅಲಂಕಾರದ ಉದ್ದೇಶಕ್ಕಾಗಿ ಬಳಸಲಾಗಿದೆಯೇ ಹೊರತು ತರಗತಿಯ ನಿರ್ವಹಣೆಯಲ್ಲಿ ಅಲ್ಲ ಎಂದು ಸ್ಪಷ್ಟವಾಗುತ್ತದೆ. ಹಾಗಾದರೆ ನಿಜವಾಗಲೂ ಮುದ್ರಣ-ಸಮೃದ್ಧ ಪರಿಸರವೆಂದರೇನು?

ಸಣ್ಣ ಮಕ್ಕಳಿಗೆ ಎಲ್ಲಿ ಹಲವು ವಿಧದ ಮುದ್ರಣಗಳ ಜೊತೆಯಲ್ಲಿ ಒಡನಾಡಲು, ಎಲ್ಲಿ ಹಲವು ವಿವಿಧ ರೀತಿಯ ಅವಕಾಶಗಳು ದೊರೆಯುತ್ತವೆಯೋ ಅಂತಹ ಪರಿಸರವು **ಮುದ್ರಣ-ಸಮೃದ್ಧ ಪರಿಸರ**ವಾಗಿರುತ್ತದೆ. ಅಂದರೆ ನಿಜವಾಗಿಯೂ ಯಾವುದೇ ತರಗತಿಯು ಮುದ್ರಣ-ಸಮೃದ್ಧ ತರಗತಿಯಾಗಬೇಕಾದರೆ, ಅಲ್ಲಿನ ಬೋಧನೆ ಮತ್ತು ಕಲಿಕೆಯಲ್ಲಿ ಮುದ್ರಣದ ಪ್ರದರ್ಶನ ಮತ್ತು ಬಳಕೆ ಅರ್ಥಪೂರ್ಣವಾಗಿರಬೇಕಾದ ಅವಶ್ಯಕತೆಯಿದೆ. ಅರ್ಥಪೂರ್ಣ ಸಂದರ್ಭಗಳಲ್ಲಿ ಮುದ್ರಣದ ಅನ್ವೇಷಣೆ ಮತ್ತು ದೊಡ್ಡವರು ಮುದ್ರಣವನ್ನು ಬಳಸುವುದನ್ನು ಗಮನಿಸುವುದು ಸಾಕ್ಷರತೆಯ ಬೆಳವಣಿಗೆಯಲ್ಲಿ ಬಹಳ ಮುಖ್ಯವಾಗುತ್ತದೆ. ಏಕೆಂದರೆ ಮುದ್ರಣವು ಅರ್ಥವನ್ನು ಕೊಡುತ್ತದೆ ಹಾಗೂ ಓದುವುದು ಮತ್ತು ಬರೆಯುವುದು ನಿಜವಾಗಿಯೂ ದೈನಂದಿನ ಉದ್ದೇಶಗಳ ಉಪಯೋಗಕ್ಕೆ ಬರುತ್ತವೆ ಎಂಬುದನ್ನು ಇವು ಮಕ್ಕಳಿಗೆ ತೋರಿಸುತ್ತವೆ. ಕಾಲಕ್ರಮೇಣ ಮಕ್ಕಳು ತಾವೇ ಓದುವುದು ಮತ್ತು ಬರೆಯುವ ಪ್ರಯತ್ನ ಮಾಡಲು ಪ್ರೇರೇಪಿತರಾಗುತ್ತಾರೆ(ಅಬ್ರಹಾಂ,2003).



ಯಾವ ಮಕ್ಕಳಿಗೆ ಮನೆಯಲ್ಲಿ ಪುಸ್ತಕಗಳ ಮತ್ತು ಮುದ್ರಣದ ಪರಿಚಯವಿರುತ್ತದೆಯೋ ಅಂತಹ ಮಕ್ಕಳು "ಸ್ವಾಭಾವಿಕ"ವಾಗಿ ಮುದ್ರಣದ ಬಗೆಗಿನ ಹಲವು ವಿಷಯಗಳನ್ನು ಕಲಿಯುತ್ತಾರೆ ಎಂದು ತೋರುತ್ತದೆ. ಆದಾಗ್ಯೂ ವಾಸ್ತವದಲ್ಲಿ, ಮಕ್ಕಳು ಈ ವಿಷಯಗಳನ್ನು ಮುದ್ರಣ-ಸಮೃದ್ಧ ಪರಿಸರಗಳಲ್ಲಿ ಕಲಿಯುತ್ತಾರೆ. ಆದ್ದರಿಂದ ಮನೆಯಲ್ಲಿ ಬಹುಶಃ ಇಂತಹ ಅನುಭವವಾಗದ ಮಕ್ಕಳಿಗೆ ಶಿಕ್ಷಕರು ಶಾಲೆಯಲ್ಲಿ ಮುದ್ರಣ-ಸಮೃದ್ಧ ಪರಿಸರವನ್ನು ಒದಗಿಸಿಕೊಡುವುದು ಅವರ ಸಾಕ್ಷರತೆಯ ಕಲಿಕೆಯನ್ನು ಹೆಚ್ಚಿಸುವಲ್ಲಿ ಬಹಳ ಮುಖ್ಯವಾಗುತ್ತದೆ. ಈ ಕೈಪಿಡಿಯಲ್ಲಿ ನಾವು ನಿಮಗೆ ಮುದ್ರಣ-ಸಮೃದ್ಧ ಪರಿಸರವನ್ನು ರಚಿಸಲು ಸಹಾಯಮಾಡುವ ಮತ್ತು ಈ ಮುದ್ರಣವನ್ನು ನಿಮ್ಮ ಭಾಷಾ ಶಿಕ್ಷಣದಲ್ಲಿ ಬಳಸುವ ಹಲವು ರೀತಿಗಳನ್ನು ಪ್ರಸ್ತುತಪಡಿಸುತ್ತಿದ್ದೇವೆ.

## ಪರಿಸರದಲ್ಲಿ ಮುದ್ರಣವನ್ನು ಬಳಸುವುದು[1]




[1] ಈ ಸಂಕ್ಷಿಪ್ತದಲ್ಲಿ ಕೊಟ್ಟಿರುವ ವಿಚಾರಗಳನ್ನು ಶೈಲಜ ಮೆನನ್ ಅವರು ಬರೆದಿರುವ 'ಶಾಲಾಪೂರ್ವ ಸಂಯೋಜನೆಗಳಲ್ಲಿರುವ ಸಾಕ್ಷರತೆಯ ಕೇಂದ್ರಗಳು' ಎಂಬುದರಿಂದ ಆಯ್ದುಕೊಳ್ಳಲಾಗಿದೆ (ವೈಯಕ್ತಿಕ ಸಂವಹನ, ಸೆಪ್ಟೆಂಬರ್ 1, 2018)

ಮಕ್ಕಳು ರಚಿಸಿರುವುದನ್ನು ಒಳಗೊಂಡಿರುವ ವಿವಿಧ ರೀತಿಯ ಮುದ್ರಣಗಳನ್ನು ತರಗತಿಯ ಸುತ್ತಲೂ ಪ್ರದರ್ಶಿಸಿ. ಮಕ್ಕಳಿಗೆ ಈ ಮುದ್ರಣಗಳನ್ನು ಹೇಗೆ ಉಪಯೋಗಿಸುವುದು ಎಂಬುದನ್ನು ತೋರಿಸಿ, ಅವುಗಳನ್ನು ಬಳಸಲು ಅವರನ್ನು ಪ್ರೋತ್ಸಾಹಿಸಿ. ಈ ಮುದ್ರಣದ ಉದ್ದೇಶವನ್ನು ತೋರಿಸಿಕೊಡುವ ದಿನಚರಿಗಳನ್ನು ಅಥವಾ ಉತ್ತೇಜನಕಾರಿ ಚಟುವಟಿಕೆಗಳನ್ನು ರೂಪಿಸಿ. ಬಹುಭಾಷಾ ತರಗತಿಗಳಲ್ಲಿ ಶಾಲೆಯ ಭಾಷೆಯ ಜೊತೆಗೆ ಮನೆಯ ಭಾಷೆಯನ್ನು ಈ ಮುದ್ರಣಗಳಲ್ಲಿ ಬಳಸುವುದು ಬಹಳ ಮುಖ್ಯ. ಈ ವಿಭಾಗದಲ್ಲಿ ನಾವು, ನಿಮ್ಮ ತರಗತಿಗಳಲ್ಲಿ ನೀವು ಬಳಸಬಹುದಾದ ವಿವಿಧ ವಿಭಾಗಗಳ ಚಟುವಟಿಕೆಗಳನ್ನು ಪಟ್ಟಿ ಮಾಡಿದ್ದೇವೆ.

### ಗುರುತು ಪಟ್ಟಿಗಳು, ವಸ್ತುಗಳು ಅಥವಾ ಬರಹದ ಪುಟಗಳ ಮುದ್ರಣ

ವಸ್ತುಗಳು ಏನೆಂದು ಮತ್ತು ಅವು ಎಲ್ಲಿಯವುಗಳು ಎಂದು ವಿದ್ಯಾರ್ಥಿಗಳಿಗೆ ಹೇಳುವ ಗುರುತು ಪಟ್ಟಿಗಳನ್ನು ಬಳಸುವುದು. ಇವುಗಳನ್ನು ಒಳಗೊಂಡ ಕೆಲವು ಸಲಹೆಗಳು:

- ವಸ್ತುಗಳ ಹೆಸರುಗಳ ಗುರುತು ಪಟ್ಟಿಗಳನ್ನು ಮಾಡಿ(ಉದಾಹರಣೆಗೆ-ಕಪ್ಪು ಹಲಗೆ, ಸೀಮೆಸುಣ್ಣ, ಬಾಚಣಿಗೆ, ಕನ್ನಡಿ ಮುಂತಾದವು).
- ವಸ್ತುಗಳನ್ನಿಡುವ ಕಪಾಟು ಮತ್ತು ಪೆಟ್ಟಿಗೆಗಳ ಹೆಸರುಗಳ ಗುರುತು ಪಟ್ಟಿಗಳನ್ನು ಮಾಡಿ. ಈ ಗುರುತು ಪಟ್ಟಿಗಳಿಗೆ ನೀವು ಮುದ್ರಿತ ಹೆಸರುಗಳು ಮತ್ತು ಚಿತ್ರಗಳನ್ನು ಬಳಸಬಹುದು. ಇದರಿಂದ ಮಕ್ಕಳು ಹೆಸರುಗಳ ಅರ್ಥವನ್ನು ಅವುಗಳು ಸೂಚಿಸುವ ವಸ್ತುಗಳು ಮತ್ತು ಉಪಯೋಗಗಳ ಜೊತೆಗೂಡಿಸಲು ಆರಂಭಿಸುತ್ತಾರೆ.
- ತರಗತಿಯಲ್ಲಿರುವ ವಿವಿಧ ಜಾಗಗಳ ಗುರುತು ಪಟ್ಟಿಗಳನ್ನು ಮಾಡಿ(ಉದಾಹರಣೆಗೆ “ಓದುವ ಜಾಗ”, “ಬರೆಯುವ ಜಾಗ” ಇತ್ಯಾದಿ)


ಮಕ್ಕಳಿಗೆ ನೀವು ಗುರುತು ಪಟ್ಟಿಗಳನ್ನು ಸಿದ್ಧಪಡಿಸುತ್ತಿರುವುದನ್ನು ನೋಡಲು ಅವಕಾಶವನ್ನು ನೀಡಿ,ಅವರನ್ನು ತಮ್ಮದೇ ಆದ ಚಿಹ್ನೆಗಳು ಮತ್ತು ಗುರುತುಪಟ್ಟಿಗಳನ್ನು ಮಾಡಲು ಆಹ್ವಾನಿಸಿ. ಮಕ್ಕಳಿಗೆ ಸುತ್ತಮುತ್ತಲೂ ಕಂಡುಬರುವಸಾಮಾನ್ಯ ಚಿಹ್ನೆಗಳು ಮತ್ತು ಸಂಕೇತಗಳನ್ನು ಾಅಳವಡಿಸಲು ಪ್ರಯತ್ನಿಸಿ(ಉದಾಹರಣೆಗೆ 'ನಿಲ್ಲಿ' ಮತ್ತು 'ಅಪಾಯ"ದ ಚಿಹ್ನೆಗಳು, ಗಂಡಸರ ಮತ್ತು ಹೆಂಗಸರ ಶೌಚಾಲಯಗಳ ಸಂಕೇತಗಳು, ಹಾಲು/ಬಿಸ್ಕತ್ತು/ಚಾಕೊಲೇಟ್ ಮುಂತಾದವುಗಳ ಪ್ರಖ್ಯಾತ ಬ್ರಾಂಡ್‌ಗಳ ಸಂಕೇತಗಳು). ದೈನಂದಿನ ಜೀವನದಲ್ಲಿ ಮುದ್ರಣವನ್ನು ಹೇಗೆ ಉಪಯೋಗಿಸಲಾಗುತ್ತದೆ ಎಂಬುದನ್ನು ಮಕ್ಕಳು ತೀಳಿಯಲು ಈ ಚಟುವಟಿಕೆಯು ಸಹಾಯ ಮಾಡುತ್ತದೆ.

### ಮಕ್ಕಳಿಗೆ ತಾವು ಏನು ಮಾಡಬೇಕೆಂಬುದನ್ನು ನೆನಪಿಸುವ ಮುದ್ರಣ

ಒಂದು ನಿರ್ದಿಷ್ಟ ವಸ್ತು ಮತ್ತು ಸ್ಥಳವನ್ನು ಹೇಗೆ ಉಪಯೋಗಿಸಬೇಕೆಂದು ನೆನಪಿಸುವ ಮುದ್ರಣವನ್ನು ತರಗತಿಯ ಸುತ್ತಲೂ ಪ್ರದರ್ಶಿಸುವುದು. ಅವುಗಳನ್ನೊಳಗೊಂಡ ಕೆಲವು ಉದಾಹರಣೆಗಳು:

- ಮಕ್ಕಳ ಜೊತೆ ನೀವು ಚರ್ಚಿಸಿದ ಸರಳ ನಿಯಮಗಳು ಅಥವಾ ಸೂಚನೆಗಳು (ಉದಾಹರಣೆಗೆ "ಶ್! ನೀವು ಓದುವ ಜಾಗದಲ್ಲಿದ್ದೀರಿ!", "ನಿಮ್ಮ ಚೀಲಗಳು ಮತ್ತು ಊಟದ ಡಬ್ಬಿಗಳನ್ನು ಇಲ್ಲಿಡಿ" ಮುಂತಾದವುಗಳು). ಮಕ್ಕಳಿಗೆ ರೂಢಿಗತವಾಗಿ ಇನ್ನೂ ಓದಲು ಬಾರದಿದ್ದರೂ, ಮಕ್ಕಳ ಗಮನವನ್ನು ವಸ್ತುಗಳ ಉಪಯೋಗಗಳ ಕಡೆಗೆ ಸೆಳೆಯಿರಿ.

ಉದಾಹರಣೆಗೆ, ಓದುವುದನ್ನು ಮುಗಿಸಿದ ಮೇಲೆ ಅವರಿಗೆ ಪುಸ್ತಕಗಳನ್ನು ಅವುಗಳ ಜಾಗದಲ್ಲಿ ಓರಣವಾಗಿ ವಾಪಸ್ಸು ಇಡುವಂತೆ ನೆನಪಿಸಿ, ಅದಕ್ಕೆ ಸಂಬಂಧಿಸಿದ ಗುರುತು ಪಟ್ಟಿಯ ಕಡೆ ಬೆರಳು ಮಾಡಿ ಅದನ್ನು ಓದಿ ಹೇಳಿ( ಚಿತ್ರ 1ರಲ್ಲಿ ತೋರಿಸಿದೆ).




ಚಿತ್ರ 1. ಓದುವ ಜಾಗದಲ್ಲಿ ಪುಸ್ತಕಗಳನ್ನು ಹೇಗೆ ಹಿಂದಿರುಗಿ ಇಡಬೇಕು ಎಂಬುದನ್ನು ನೆನಪಿಸುವ ಮುದ್ರಣ, ಕ್ಯುಯುಇಎಸ್‌ಟಿ, ಮಹಾರಾಷ್ಟ್ರ

- ಮಕ್ಕಳು ರೂಪಿಸಿರುವ ಚಿಹ್ನೆಗಳು (ಉದಾ:- ದಯವಿಟ್ಟು ನಮ್ಮ ಯೋಜನಾ ಕಾರ್ಯವನ್ನು (project) ಮುಟ್ಟಬೇಡಿ)

## ಮಕ್ಕಳಿಗೆ ಮಾಹಿತಿಯನ್ನು ತಿಳಿಸುವ ಮುದ್ರಣ

ಮಕ್ಕಳಿಗೆ ಮಾಹಿತಿಯನ್ನು ಕೊಡುವ ಮುದ್ರಣವನ್ನು ಪ್ರದರ್ಶಿಸಿ, ಅದನ್ನು ಬಳಸಿ. ಈ ಮುದ್ರಣವು ಅನೇಕ ರೂಪಗಳನ್ನು ಪಡೆಯಬಹುದು.

ಕೆಲವು ಉದಾಹರಣೆಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ:

- ಮಕ್ಕಳ ಹೆಸರುಗಳನ್ನು ಬರೆದಿರುವ ಕಲಾಕೃತಿಗಳು(ಮಕ್ಕಳೇ ಬರೆದಿರುವ ಅಥವಾ ದೊಡ್ಡವರಿಗೆ ಹೇಳಿ ಬರೆಸಿರುವ)
- ಕಲಾಕೃತಿಯ ಪಕ್ಕದಲ್ಲೇ ಪ್ರದರ್ಶಿಸಿರುವ ಮಕ್ಕಳ ಕಲಾಕೃತಿಗಳ ವಿವರಣೆಗಳು ಅಥವಾ ಬರೆಹದ ಪ್ರಯತ್ನಗಳು (ಚಿತ್ರ. ೨ರಲ್ಲಿ ತೋರಿಸಲಾಗಿದೆ). ಈ ವಿವರಣೆಗಳನ್ನು ಮಕ್ಕಳ ಪದಗಳಲ್ಲೇ ಅವುಗಳನ್ನು ಬರೆಯುವ ದೊಡ್ಡವರಿಗೆ ಹೇಳಿ ಬರೆಯಿಸಲಾಗಿದೆ.



ಚಿತ್ರ 2. ಮಕ್ಕಳ ಕಲಾಕೃತಿಯ ವಿವರಣೆ ನೀಡುವ ಟಿಪ್ಪಣಿ[2]



ಚಿತ್ರ 3: ತರಗತಿಯ ಹೆಸರಿನ ಚಾರ್ಟು, ಓಇಎಲ್‌ಪಿ, ರಾಜಸ್ಥಾನ

- ಮಕ್ಕಳ ಹೆಸರುಗಳ ಚಾರ್ಟು. ಇದನ್ನು ವಿವಿಧ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದು(ಚಿತ್ರ 3ನ್ನು ನೋಡಿ). ಉದಾಹರಣೆಗೆ, ಮಕ್ಕಳಿಗೆ ಓಡಿ ಹೋಗಿ ಒಂದು ನಿರ್ದಿಷ್ಟ ಅಕ್ಷರ ಅಥವಾ ಶಬ್ದದೊಂದಿಗೆ ಪ್ರಾರಂಭವಾಗುವ/ಕೊನೆಗೊಳ್ಳುವ ಹೆಸರುಗಳನ್ನು ಕಂಡುಹಿಡಿಯಲು ಹೇಳುವುದು.
- ಮಕ್ಕಳ ಕಣ್ಣಿನ ನೇರಕ್ಕೆ ತೂಗು ಹಾಕಿರುವ ವರ್ಣಮಾಲೆಯ ಚಾರ್ಟು. ನೀವು ನಿರ್ದಿಷ್ಟ ಅಕ್ಷರಗಳ ಗುಂಪನ್ನು ಕಲಿಸುತ್ತಿದ್ದರೆ, ಕಲಿಸುತ್ತಿದ್ದರೆ, ಆ ಗುಂಪನ್ನು ಮುಖ್ಯವಾಗಿ ಪ್ರದರ್ಶಿಸಿ, ಪಾಠ ಮಾಡಬೇಕಾದರೆ ಅದನ್ನು ಬಳಸಿ (ಪದದ ಅಧ್ಯಯನದ ಚಟುವಟಿಕೆಗಳನ್ನು ಕೊನೆಯ ವಿಭಾಗದಲ್ಲಿ ನೋಡಿ. ಇಂಗ್ಲೀಷ್‌ನಲ್ಲಿ, ದೊಡ್ಡ(ಕ್ಯಾಪಿಟಲ್) ಮತ್ತು ಸಣ್ಣ ಅಕ್ಷರಗಳೆರಡನ್ನೂ ಚಿತ್ರ 4ರಲ್ಲಿರುವಂತೆ ಪ್ರದರ್ಶಿಸಬೇಕು.

[2] ಮೂಲ: https://www.oise.utoronto.ca/balancedliteracydiet/Home/index.html




ಚಿತ್ರ 4. ಅಕ್ಷರಗಳ ಚಾರ್ಟು, ಇಎಲ್ಐ, ಹೈದರಾಬಾದ್




ಚಿತ್ರ 5. ಪದಗಳ ಗೋಡೆ, ಒಇಎಲ್‌ಪಿ, ರಾಜಸ್ಥಾನ


- ನಿಮ್ಮ ತರಗತಿಯಲ್ಲಿ ಸಾಮಾನ್ಯವಾಗಿ ಬಳಸುವ ಅಥವಾ ಕಂಡುಬರುವ ಪದಗಳನ್ನೊಳಗೊಂಡ 'ಪದಗಳ ಗೋಡೆ' (ಉದಾಹರಣೆಗೆ, ಆಯಿ, ಬಾಬಾ, ಮಾಮ, ತಾಯಿ, ಕಾಕು, ಹಸು, ಮನೆ, ನೀರು ಮುಂತಾದವುಗಳು). ಮಕ್ಕಳು ಇಲ್ಲಿನ ಕೆಲವು ಪದಗಳನ್ನು ಬರೆಯಲು/ಓದಲು ಬಯಸಿದರೆ ಈ ಚಾರ್ಟನ್ನು ಅವರು ನೋಡಬಹುದು. ಮಕ್ಕಳು ಸಣ್ಣ ರಟ್ಟಿನ ಹಾಳೆಗಳ ಮೇಲೆ ನಿಮ್ಮ ನೆರವಿನಿಂದ ತಾವೇ ಈ ಪದಗಳನ್ನು ಬರೆಯಬಹುದು. ಚಿತ್ರ 5ರಲ್ಲಿ ತೋರಿಸಿರುವಂತೆ ನೀವು ಪದಗಳ ಗೋಡೆಯನ್ನು ರಚಿಸಿದರೆ ವಿದ್ಯಾರ್ಥಿಗಳು ಹೊಸಪದಗಳನ್ನು ಸೇರಿಸುತ್ತಾ ಹೋದಂತೆಲ್ಲ ಹಳೆಯ ಪದಗಳನ್ನು ಉಳಿಸಿಕೊಳ್ಳಬಹುದು.

- ಚಿತ್ರಸಹಿತ ಶಬ್ದಕೋಶದ ಚಾರ್ಟುಗಳು, ಇದರ ಉದಾಹರಣೆಯನ್ನು ಚಿತ್ರ 6ರಲ್ಲಿ ತೋರಿಸಲಾಗಿದೆ. ಇದನ್ನು ಮಕ್ಕಳು ನಿಮ್ಮ ಸಹಾಯದಿಂದ ರಚಿಸಬಹುದು.




ಚಿತ್ರ 6. ಚಿತ್ರಸಹಿತ ಶಬ್ದಕೋಶ, ಸೀತಾ ಸ್ಕೂಲು, ಬೆಂಗಳೂರು

- ಯಾವುದನ್ನಾದರೂ ಮಾಡುವ (ಉದಾಹರಣೆಗೆ ಪಾಕ ವಿಧಾನ, ಕಾಗದದ ಮಡಿಕೆಯ ತಂತ್ರಗಳು(ಅರಿಗ್ಯಾಮಿ) ಇತ್ಯಾದಿ) ಹಂತಗಳನ್ನು ವಿವರಿಸುವ ಪದಗಳು ಮತ್ತು ಚಿತ್ರಗಳನ್ನೊಳಗೊಂಡ ಚಾರ್ಟುಗಳು(ಚಿತ್ರ 7ನ್ನು ನೋಡಿ)




ಚಿತ್ರ 7. ಹೆಬ್ಬೆರಳ ಅಚ್ಚಿನ ಚಿತ್ರಗಳನ್ನು ಮಾಡುವ ವಿಧಾನದ ಹಂತಗಳನ್ನು ವಿವರಿಸುವ ಚಾರ್ಟು, ಆಸಮ್ ಆರ್ಟ್ ಮತ್ತು ಕೂಲ್ ಕ್ರಾಫ್ಟ್ಸ್, ಸ್ಕಲಾಸ್ಟಿಕ್, 2011

## ಪ್ರತಿಕ್ರಿಯೆಗಳನ್ನು ಹೊರಹೊಮ್ಮಿಸುವ ಮುದ್ರಣ

ಮಕ್ಕಳ ಪ್ರತಿಕ್ರಿಯೆಗಳನ್ನು ಅಥವಾ ಭಾಗವಹಿಸುವಿಕೆಯನ್ನು ಬಯಸುವ ಮುದ್ರಣವನ್ನು ನಿಮ್ಮ ತರಗತಿಯಲ್ಲಿ ಅಳವಡಿಸಿ. ಉದಾಹರಣೆಗಳು:

- ಹಾಜರಾತಿಯ ಚಾರ್ಟುಗಳು(ಮಕ್ಕಳು ತಮ್ಮ ಹೆಸರಿನ ಮುಂದೆ ಸಹಿ ಹಾಕಬಹುದು ಅಥವಾ ಚಿತ್ರ 8ರಲ್ಲಿ ತೋರಿಸಿರುವಂತೆ ಪಟ್ಟಿಯಲ್ಲಿ ತಮ್ಮ ಹೆಸರಿನ ಮುಂದೆ ರೈಟ್ ಮಾರ್ಕನ್ನು (checks) ಹಾಕಬಹುದು.



ಚಿತ್ರ 8. ಹಾಜರಾತಿಯ ಚಾರ್ಟಿನಲ್ಲಿ ತನ್ನ ಹೆಸರಿನ ಸಹಿ ಮಾಡುತ್ತಿರುವ ಮಗು, ಕ್ಯುಯುಇಎಸ್‌ಟಿ, ಮಹಾರಾಷ್ಟ್ರ




ಚಿತ್ರ ೯. ವಿದ್ಯಾರ್ಥಿಗಳೊಂದಿಗೆ ಪ್ರತಿನಿತ್ಯದ ವೇಳಾಪಟ್ಟಿಯನ್ನು ಚರ್ಚಿಸುತ್ತಿರುವ ಅಧ್ಯಾಪಕಿ

- ಪ್ರತಿನಿತ್ಯದ/ವಾರದ ತರಗತಿಯ ವೇಳಾಪಟ್ಟಿ. ಚಿತ್ರ ೯ರಲ್ಲಿ ತೋರಿಸಿರುವಂತೆ ಪ್ರತಿ ಮುಂಜಾನೆ ವಿದ್ಯಾರ್ಥಿಗಳ ಜೊತೆ ಆ ದಿನದ ವೇಳಾಪಟ್ಟಿಯನ್ನು ಚರ್ಚಿಸುತ್ತಾ, ಅವರಿಗೆ ಬಹುಶಃ ಚಟುವಟಿಕೆಗಳನ್ನು ಮತ್ತು ಜವಾಬ್ದಾರಿಗಳನ್ನು ಕೊಡಬಹುದು.
- ಸಹಿಯ ಹಾಳೆಗಳು(ಉದಾಹರಣೆಗೆ, ಮಕ್ಕಳು ತರಗತಿಯ ಚಟುವಟಿಕೆಯನ್ನು ಮಾಡಲು ಸಹಿಹಾಕುವ ಹಾಳೆ).
- ದಾಖಲೆಯ ಹಾಳೆಗಳು(ಉದಾಹರಣೆಗೆ, ನೀವು ಜೋರಾಗಿ ಓದಿ ಹೇಳಿದ ಪುಸ್ತಕಗಳ ಪಟ್ಟಿಯನ್ನು ನಿರ್ವಹಿಸಬಹುದು)
- ಮಕ್ಕಳು ತಮ್ಮ ಹೆಸರುಗಳನ್ನು ಸೂಕ್ತ ಜಾಗದಲ್ಲಿ ಬರೆಯುವುದರ ಮೂಲಕ ಉತ್ತರಿಸುವಂತಹ ಸಮೀಕ್ಷೆಗಳು. ಚಿತ್ರ 10, ಈ ಚಟುವಟಿಕೆಯಲ್ಲಿನ ಒಂದು ಸಣ್ಣ ಬದಲಾವಣೆಯನ್ನು ತೋರಿಸುತ್ತದೆ. ಅದರಲ್ಲಿನ ಚಾರ್ಟು, ಶಿಕ್ಷಕಿಯು Dear Zoo (Rod Campbell, 1982 ಎಂಬ ಪುಸ್ತಕವನ್ನು ಮಕ್ಕಳಿಗೆ ಓದಿ ಹೇಳಿದ ನಂತರ ಮಕ್ಕಳ ಪ್ರತಿಕ್ರಿಯೆಯನ್ನು ಕೇಳುತ್ತದೆ. ಮಕ್ಕಳು ಪ್ರಾಣಿ ಸಂಗ್ರಹಾಲಯದಿಂದ ತಾವು ಬಯಸಿದ ಪ್ರಾಣಿಯ ಚಿತ್ರಕ್ಕೆ ಬಣ್ಣವನ್ನು ತುಂಬಿ ಗುರುತು ಮಾಡಿ ಅದನ್ನು ಅಂಟಿಸುತ್ತಾರೆ.




ಚಿತ್ರ 10. ತಮ್ಮ ಅಚ್ಚುಮೆಚ್ಚಿನ ಪ್ರಾಣಿಯ ಮೂಲಕ ಪ್ರತಿಕ್ರಿಯೆ ನೀಡುವಂತೆ ಕೇಳುತ್ತಿರುವ ಚಾರ್ಟು




ಚಿತ್ರ 11. ಮಕ್ಕಳು ರಚಿಸಿರುವ ಪದ್ಯದ ಚಿತ್ರಪಟ

- ಭಾಷೆಯ ಅನುಭವ ನೀಡುವ ಚಾರ್ಟುಗಳು(ಇದರಲ್ಲಿ ನೀವು ಮಕ್ಕಳ ಕಥೆಗಳು, ಸಹಭಾಜಿತ(shared) ಅನುಭವದ ನೆನಪುಗಳು, ಉದಾಹರಣೆಗೆ ಮಾರುಕಟ್ಟೆಗೆ ನಿಮ್ಮ ಇತ್ತೀಚಿನ ಭೇಟಿ ಇತ್ಯಾದಿಗಳನ್ನು ದಾಖಲಿಸಬಹುದು) ಅಥವಾ ವಿದ್ಯಾರ್ಥಿಗಳು ಸಹಯೋಗದಿಂದ ರಚಿಸಿದ ಬರಹ.

- ಮಕ್ಕಳು ಇತ್ತೀಚೆಗೆ ಓದಿದ/ಕೇಳಿದ ಪದ್ಯದ ಚಾರ್ಟುಗಳು ಮತ್ತು ಕತೆಯ ಚಿತ್ರಪಟಗಳುಗಳು. ಸಹಭಾಜಿತ ಓದಿನ ಅವಧಿಗಳಲ್ಲಿ ಈ ಮುದ್ರಣವನ್ನು ಉಪಯೋಗಿಸಿ. ಮಕ್ಕಳು ಶಾಲೆಯಲ್ಲಿ ಮತ್ತು ಹೊರಗಡೆ ತಾವು ಕೇಳಿದ ಹಾಡುಗಳನ್ನು ಹೇಳಲು ಇಷ್ಟಪಡುತ್ತಾರೆ. ಇವುಗಳನ್ನು ನೀವು ಚಿತ್ರಪಟಗಳನ್ನು ರಚಿಸಲು ಉಪಯೋಗಿಸಬಹುದು. ಹಿರಿಯ ವಿದ್ಯಾರ್ಥಿಗಳು ನೀವು ಕೊಟ್ಟ ಪಠ್ಯವನ್ನು ಒಂದು ಹಾಳೆಯ ಮೇಲೆ ನಕಲು ಮಾಡಲು ಹೇಳಬಹುದು. ಕಿರಿಯ ವಿದ್ಯಾರ್ಥಿಗಳು ಚಿತ್ರಗಳನ್ನು ಸೇರಿಸಲು ಸಹಾಯ ಮಾಡಬಹುದು. ಚಿತ್ರ 11, ಇಂತಹ ಒಂದು ಉದಾಹರಣೆಯನ್ನು ತೋರಿಸುತ್ತದೆ.

ನಾವು ಹಿಂದೆ ತಿಳಿಸಿದಂತೆ, ಬರೀ ಮುದ್ರಣವೊಂದನ್ನೇ ಪ್ರದರ್ಶಿಸಿದರೆ ಸಾಲುವುದಿಲ್ಲ; ತರಗತಿಯ ದಿನಚರಿಯಲ್ಲಿ ಮತ್ತು ಬೋಧನಾ-ಕಲಿಕೆಯ ಚಟುವಟಿಕೆಗಳಲ್ಲಿ ಇದನ್ನು ಬಳಸುತ್ತಿರಬೇಕು. ಇದರ ಅರ್ಥವೇನೆಂದರೆ ಮಕ್ಕಳ ಕಲಿಯುವಿಕೆಯ ಆಧಾರದ ಮೇಲೆ ಪ್ರದರ್ಶಿಸಿರುವುದನ್ನು ಆಗಾಗ ಬದಲಿಸುತ್ತಿರಬೇಕು. ಆದ್ದರಿಂದ ಈ ಕಾರಣಕ್ಕಾಗಿ ಗೋಡೆಯ ಮೇಲೆ ಚಿತ್ರಿಸಿರುವ ಯಾವುದೇ ಮುದ್ರಣದ ಉಪಯೋಗ, ಈ ಕೈಪಿಡಿಯ ಆರಂಭದಲ್ಲಿರುವ ತರಗತಿಯಂತೆ, ಬಹಳ ಸೀಮಿತವಾಗಿರುವ ಸಾಧ್ಯತೆ ಇರುತ್ತದೆ. ಪ್ರದರ್ಶಕಗಳನ್ನು ಮಕ್ಕಳ ಕಣ್ಣಿನ ನೇರಕ್ಕೆ ತೂಗು ಹಾಕಿರಬೇಕು ಮತ್ತು ಲಿಪಿಯು ತರಗತಿಯ ಯಾವುದೇ ಕಡೆಯಿಂದಲೂ ಕಾಣುವಷ್ಟು ದೊಡ್ಡದಿರಬೇಕು.

ಹಿಂದೆ ಚರ್ಚಿಸಿದ ಪರಿಸರದಲ್ಲಿರುವ ಸಾಮಾನ್ಯ ಮುದ್ರಣಕ್ಕೆ ಹೆಚ್ಚುವರಿಯಾಗಿ ನೀವು ಓದು, ಬರಹ ಮತ್ತು ಪದಗಳ-ಅಭ್ಯಾಸದ ನಿರ್ದಿಷ್ಟ ಜಾಗಗಳನ್ನು ಹೊಂದಿರುವುದು ಮುಖ್ಯವಾಗುತ್ತದೆ. ಮುಂದಿನ ಮೂರು ವಿಭಾಗಗಳು ಈ ಜಾಗಗಳೆಂದರೇನು ಮತ್ತು ಅವುಗಳನ್ನು ತರಗತಿಯಲ್ಲಿ ಹೇಗೆ ನಿರ್ಮಿಸಬಹುದೆಂಬುದರ ಬಗ್ಗೆ ವಿವರವಾದ ಮಾಹಿತಿಯನ್ನು ಕೊಡುತ್ತವೆ.

## ಓದುವ ಜಾಗ/ತರಗತಿಯ ಪುಸ್ತಕಾಲಯವನ್ನು ಹೇಗೆ ನಿರ್ಮಿಸುವುದು

ಮಕ್ಕಳ ಪುಸ್ತಕಗಳಿಂದ ಚೆಂದವಾಗಿ ಜೋಡಿಸಿಟ್ಟ ತರಗತಿಯ ಪುಸ್ತಕಾಲಯ ಅಥವಾ ಓದುವ ಜಾಗ, ಮಕ್ಕಳಿಗೆ ಸಂತೋಷದಿಂದ ಕಣ್ಣಾಡಿಸಲು ಮತ್ತು ತಾವೇ ಸ್ವತಃ ಓದಲು ಅನುಕೂಲಕರವಾದ ಸ್ಥಳವಾಗಿದ್ದು, ತರಗತಿಯಲ್ಲಿ ಹೊಂದಿರಬಹುದಾದ ಒಂದು ಮುಖ್ಯ ಸ್ಥಳವಾಗಿದೆ. ಪ್ರಾರಂಭ ಮಾಡಲು ನಿಮ್ಮ ಬಳಿ ಕಡಿಮೆ ಪುಸ್ತಕಗಳಿದ್ದರೆ ನಿರುತ್ಸಾಹಗೊಳ್ಳಬೇಡಿ. ನಿಮ್ಮ ಬಳಿ ಇರುವುದನ್ನೇ ಬಳಸಿ ಇದನ್ನು ನಿರ್ಮಿಸಬಹುದು. ಸಂಪನ್ಮೂಲಗಳು ಲಭ್ಯವಾಗುತ್ತಿದ್ದ ಹಾಗೇ ಸಂಗ್ರಹವನ್ನು ಹೆಚ್ಚಿಸುತ್ತಾ ಹೋಗಬಹುದು. ನೀವು ಶಾಲೆಯ ಪುಸ್ತಕಾಲಯದಿಂದಲೂ ಪುಸ್ತಕಗಳನ್ನು ಬಳಸಬಹುದು ಮತ್ತು ಒಂದೆರಡು ದಿನಗಳಿಗೊಮ್ಮೆ ಅವುಗಳನ್ನು ಬದಲಾಯಿಸಬಹುದು. ಓದುವ ಜಾಗ ಹೇಗೆ ಕಾಣಿಸುತ್ತದೆಯೆಂದು ಚಿತ್ರ 12 ತೋರಿಸುತ್ತದೆ.



ಚಿತ್ರ 12. ಓದುವ ಜಾಗ, ಮುಂಬೈ ಮೊಬೈಲ್ ಕ್ರೀಚಸ್, ಮಹಾರಾಷ್ಟ್ರ

## ಓದುವ ಜಾಗಕ್ಕೆ ಸೂಚಿಸಿರುವ ವಸ್ತುಗಳು

- ಪುಸ್ತಕಗಳನ್ನು ಪ್ರದರ್ಶಿಸಲು ಬೇಕಾದ ವ್ಯವಸ್ಥೆ. ಸಾಧ್ಯವಾದರೆ ಗೋಡೆಗೆ ಹೊಂದಿಕೊಂಡಂತಿರುವ ಚಿಕ್ಕ ತೆರೆದ ಕಪಾಟುಗಳು ಅಥವಾ ಚಿಕ್ಕ ಮೇಜುಗಳನ್ನು ಬಳಸುವುದು. ಪುಸ್ತಕಗಳನ್ನು ಮಕ್ಕಳ ಕಣ್ಣಿನ ನೇರಕ್ಕೆ ತಂತಿಗಳಿಂದ ಇಳಿಬಿಟ್ಟು ಪ್ರದರ್ಶಿಸಬಹುದು ಅಥವಾ ಚಾಪೆಗಳ ಮೇಲೂ ಅಥವಾ ಟ್ರೇಗಳಲ್ಲೂ ಇಡಬಹುದು.
- ಮಕ್ಕಳಿಗೆ ಕುಳಿತುಕೊಳ್ಳಲು ಮತ್ತು ಓದಲು ಬೇಕಾದ ಚಾಪೆ/ರಗ್ಗು/ಸ್ಥಳ
- ವಿವಿಧ ಪ್ರಕಾರಗಳ ಪುಸ್ತಕಗಳು: ಕಾಲ್ಪನಿಕ, ಕಾಲ್ಪನಿಕವಲ್ಲದ ಕಾವ್ಯ/ಶಿಶುಗೀತೆಗಳು, ವರ್ಣಮಾಲೆಯ ಪುಸ್ತಕಗಳು, ಚಿತ್ರಪುಸ್ತಕಗಳು, ಪದರಹಿತ ಪುಸ್ತಕಗಳು, ವಿದ್ಯಾರ್ಥಿಗಳು ಮಾಡಿದ ಪುಸ್ತಕಗಳು, ಚಟುವಟಿಕೆಯ ಪುಸ್ತಕಗಳು, ಮಕ್ಕಳ ನಿಯತಕಾಲಿಕೆಗಳು, ಒಗಟುಗಳ ಪುಸ್ತಕಗಳು, ಮಕ್ಕಳ ಶಬ್ದಕೋಶ ಮತ್ತು ಭೂಪಟಗಳಂತಹ ಪರಾಮರ್ಶನ ಗ್ರಂಥಗಳು ಇತ್ಯಾದಿ. ನೀವು ಪುಸ್ತಕಗಳನ್ನು ಕ್ರಮವಾಗಿ ಜೋಡಿಸುತ್ತಿದ್ದರೆ (ಉದಾಹರಣೆಗೆ, ಪ್ರಕಾರಗಳು, ಭಾಷೆಯ ಇತ್ಯಾದಿಗಳ ನಿಟ್ಟಿನಲ್ಲಿ), ಅವುಗಳ ಗುರುತು ಪಟ್ಟಿ ಮಾಡಿ ಮಕ್ಕಳಿಗೆ ಅವುಗಳ ಅರ್ಥವನ್ನು ಸರಳ ಪದಗಳಲ್ಲಿ ವಿವರಿಸುವುದು.
- ಮನೆಯಲ್ಲಿ ಬಳಸುವ ಭಾಷೆ ಮತ್ತು ಶಾಲೆಯಲ್ಲಿ ಬೋಧಿಸುವ ಭಾಷೆ ಎರಡರಲ್ಲೂ ಇರುವ ಮಕ್ಕಳ ಪುಸ್ತಕಗಳು.
- ಮೂಲ ಲೇಖನ ಸಾಮಗ್ರಿಗಳಾದ ಖಾಲಿ ಹಾಳೆಗಳು, ಕರಕುಶಲ ಕೆಲಸಗಳಿಗಾಗಿ ಬಳಸುವ ಕಾಗದಗಳು, ಪೆನ್ಸಿಲ್ಲುಗಳು, ಬಣ್ಣಗಳು ಇತ್ಯಾದಿ
- ತರಗತಿಯಲ್ಲಿ ಜೋರಾಗಿ ಓದಿ ಹೇಳುವ ಜನಪ್ರಿಯ ಪುಸ್ತಕಗಳಿಗೆ ತಕ್ಕ ಸೂತ್ರದ ಗೊಂಬೆಗಳು ಮತ್ತು ರಂಗಪರಿಕರಗಳು

**ಓದುವ ಜಾಗದಲ್ಲಿ ಸೂಚಿಸಿರುವ ಚಟುವಟಿಕೆಗಳು**

**ಮೌಖಿಕವಾಗಿ ಕಥೆ ಹೇಳುವುದು ಮತ್ತು ಗಟ್ಟಿಯಾಗಿ ಓದುವುದು[3]**

ಮೌಖಿಕವಾಗಿ ಕಥೆ ಹೇಳುವುದು-ಕಥೆಯನ್ನು ಮಕ್ಕಳಿಗೆ ನಿರೂಪಿಸುವುದು ಮತ್ತು ಅದನ್ನು ಅವರ ಜೊತೆ ಚರ್ಚಿಸುವುದನ್ನು ಒಳಗೊಂಡಿರುತ್ತದೆ; ಗಟ್ಟಿಯಾಗಿ ಓದುವುದರಲ್ಲಿ, ನೀವು ಒಂದು ಪುಸ್ತಕದಿಂದ ಕಥೆಯನ್ನು ಮಕ್ಕಳಿಗೆ ಓದಿ ಹೇಳುವಿರಿ. ಬರಿಯ ಕಥೆಯ ಪುಸ್ತಕಗಳಲ್ಲದೇ, ಕಾಲ್ಪನಿಕವಲ್ಲದ ಪುಸ್ತಕಗಳನ್ನು (ಉದಾಹರಣೆಗೆ, ಪ್ರಾಣಿಗಳು ಮತ್ತು ಸಸ್ಯಗಳನ್ನು ಕುರಿತಾದ ಪುಸ್ತಕಗಳು) ಮಕ್ಕಳಿಗೆ ಗಟ್ಟಿಯಾಗಿ ಓದಿ ಹೇಳಬಹುದು.

**ಸಹಭಾಜಿತ ಓದು// ಸಹಪಠನ (shared reading)**

ಆಡುವ ಭಾಷೆ ಮತ್ತು ಮುದ್ರಿಸಿದ ಅಕ್ಷರಗಳು ಹೇಗೆ ಒಂದಕ್ಕೊಂದು ಜೊತೆಯಾಗಿವೆ ಹಾಗೂ ನಿರರ್ಗಳವಾಗಿ, ಅರ್ಥಗರ್ಭಿತವಾಗಿ ಓದುವುದು ಹೇಗಿರುತ್ತದೆ ಎಂದು ತೋರಿಸಲು ಸಹಪಠನ ಒಂದು ಮುಖ್ಯ ರೀತಿಯಾಗಿದೆ. ಮುದ್ರಣದ ವಿವಿಧ ಲಕ್ಷಣಗಳು ಮತ್ತು ಕಾರ್ಯಗಳನ್ನು ತಿಳಿಸಲು ಇದು ಒಂದು ಅವಕಾಶವನ್ನು ಸಹ ನೀಡುತ್ತದೆ. ಸಹಪಠನವು ಸಚಿತ್ರ ವಿವರಣೆಗಳುಳ್ಳ ದೊಡ್ಡಲಿಪಿಯಿರುವ ಪುಸ್ತಕದಲ್ಲಿರುವ ಒಂದೊಂದು ಪದವನ್ನು ಬೆರಳಿನಿಂದ ತೋರಿಸುತ್ತಾ ಗಟ್ಟಿಯಾಗಿ ಓದುವುದನ್ನು ಒಳಗೊಂಡಿದೆ. ಒಂದೆರಡು ದಿನ ಇದೇ ರೀತಿ ಪುಸ್ತಕವನ್ನು ಓದಿ, ಎಲ್ಲಿ ಸಾಧ್ಯವೋ ಅಲ್ಲಿ ಮಕ್ಕಳನ್ನು ನಿಮ್ಮ ಜೊತೆ ಓದಲು ಆಹ್ವಾನಿಸಿ. ಪುನರಾವರ್ತನೆಯಾಗುವ ಪದಗಳು ಮತ್ತು ನುಡಿಗಟ್ಟುಗಳುಳ್ಳ ಪುಸ್ತಕಗಳು ಸುಲಭವಾಗಿ ಓದಲು ಸಹಾಯ ಮಾಡುತ್ತವೆ. ಕೆಲವು ಪಠ್ಯಗಳ ಪಠನಗಳಲ್ಲಿ ನೀವು ಮುದ್ರಣದ ಒಂದು ಲಕ್ಷಣದ ಬಗ್ಗೆ ಲಘುವಾಗಿ ಚರ್ಚಿಸಬಹುದು[4](ಉದಾಹರಣೆಗೆ ವಿವಿಧ ವಿರಾಮಚಿಹ್ನೆಗಳು) ಮತ್ತು ಅವು ಹೇಗೆ ಅರ್ಥ ಮತ್ತು ಅಭಿವ್ಯಕ್ತಿಯನ್ನು ಬದಲಿಸುತ್ತವೆ ಎಂದು ಹೇಳಬಹುದು. ನಿಮ್ಮ ಬಳಿ ದೊಡ್ಡ ಅಕ್ಷರಗಳ ಪುಸ್ತಕಗಳು ಲಭ್ಯವಿಲ್ಲದಿದ್ದರೆ, ನೀವು ಕಥೆಗಳು ಅಥವಾ ಪದ್ಯಗಳು ಅಥವಾ ಮಕ್ಕಳ ಅನುಭವಗಳನ್ನು ದೊಡ್ಡ ಅಕ್ಷರಗಳಲ್ಲಿ ಒಂದು ಚಾರ್ಟ್ ಪೇಪರಿನಲ್ಲಿ ಬರೆದು ಅವುಗಳನ್ನು ಸಹಪಠನಗಳಲ್ಲಿ ಉಪಯೋಗಿಸಬಹುದು.

**ಕಥೆಯನ್ನು ಪುನಃ ಹೇಳುವುದು:**

ವಿದ್ಯಾರ್ಥಿಗಳು ತರಗತಿಯಲ್ಲಿ ಜೊತೆಯಲ್ಲಿ ಓದಿದ ಕಥೆಗಳನ್ನು ಪುನಃ ಹೇಳಲು ಅವರಿಗೆ ಸಹಾಯ ಮಾಡಿ. ಅವರು ಪಾತ್ರಾಭಿನಯ, ನಾಟಕ ಮತ್ತು ಗೊಂಬೆಯಾಟಗಳ ಮೂಲಕ ಕಥೆಗಳನ್ನು ಪುನಃ ಹೇಳಬಹುದು. ಮಕ್ಕಳಿಗೆ ಕಥೆಗೆ/ಪುಸ್ತಕಕ್ಕೆ ಸಂಬಂಧಿಸಿದ ಆಸಕ್ತಿದಾಯಕ ರಂಗಪರಿಕರಗಳು ಮತ್ತು ವಸ್ತುಗಳನ್ನು ಒದಗಿಸಿದರೆ ತಮ್ಮ ಬಿಡುವಿನ ವೇಳೆಯಲ್ಲಿ ತಾವೇ ಕಥೆಯನ್ನು ಪುನಃ ಹೇಳುವುದನ್ನು ನೋಡಬಹುದು. ಭಾಷೆಯ ತರಗತಿಯಲ್ಲಿ ಹೆಚ್ಚು ಕೂಲಂಕುಷವಾಗಿ ಸ್ಪಷ್ಟವಾಗಿ ಇದನ್ನು ಹೇಳಿಕೊಡಬಹುದು. ಕಥೆಯನ್ನು ಪುನಃ ಹೇಳುವಾಗ, ಪಾತ್ರಗಳು, ಕಥೆ

---

[3] ಹೆಚ್ಚಿನ ವಿವರಗಳಿಗಾಗಿ, ELI's Practitioner Brief – 9 'Reading Aloud with Young Children' ಅನ್ನು ದಯವಿಟ್ಟು ಪರಾಮರ್ಶಿಸಿ.

[4] ಮುದ್ರಣವನ್ನು ಕುರಿತ ಪರಿಕಲ್ಪನೆಗಳ ವಿವರಗಳಿಗಾಗಿ, ELI's Practitioner Brief, 'Emergent Literacy' ಅನ್ನು ದಯವಿಟ್ಟು ಪರಾಮರ್ಶಿಸಿ.

ನಡೆಯುವ ಸನ್ನಿವೇಶ, ಘಟನೆಗಳ ಕ್ರಮ ಮತ್ತು ಮುಖ್ಯ ಸಮಸ್ಯೆ ಮತ್ತು ಅದರ ಪರಿಹಾರದ ಬಗ್ಗೆ ಚರ್ಚಿಸಲು ಮಕ್ಕಳಿಗೆ ನೆನಪಿಸಿ.

**ಸ್ವತಂತ್ರ/ಬಿಡುವಿನ ಓದಿನ ಸಮಯ:**

ಮಕ್ಕಳಿಗೆ ಸ್ವತಂತ್ರವಾಗಿ ಪುಸ್ತಕಗಳನ್ನು ಓದಲು ಮತ್ತು ಪರಿಶೋಧನೆ ಮಾಡಲು ಅವಕಾಶ ನೀಡಿ. ಈ ಚಟುವಟಿಕೆಯು ತರಗತಿಯ ಯೋಜಿತ ಸಮಯದ ಭಾಗವಾಗಬಹುದು (ಉದಾಹರಣೆಗೆ, ಒಂದು ಗುಂಪು ಮಾರ್ಗದರ್ಶಿತ ಓದಿನ ಚಟುವಟಿಕೆಯನ್ನು ಮಾಡುತ್ತಿರುವಾಗ, ಇನ್ನೊಂದು ಗುಂಪು ಓದಿನ ಜಾಗದಲ್ಲಿರುವ ಪುಸ್ತಕಗಳ ಪರಿಶೋಧನೆ ಮಾಡಬಹುದು. ಅಥವಾ, ನಿರ್ದಿಷ್ಟ ವೇಳೆಯಲ್ಲಿ ಅಲ್ಲದೇ, ಇತರೆ ಸಮಯಗಳಲ್ಲಿಯೂ ಆ ಸ್ಥಳದ ಉಪಯೋಗ ಮಾಡಿಕೊಳ್ಳಲು ನೀವು ಮಕ್ಕಳ ಜೊತೆಗೂಡಿ ನಿಯಮಗಳನ್ನು ರೂಪಿಸಬಹುದು. ಉದಾಹರಣೆಗೆ ಒಂದು ವೇಳೆ ಯಾವುದಾದರೂ ಮಗು ತನ್ನ ಕೆಲಸವನ್ನು ಬೇರೆಯವರಿಗಿಂತ ಬೇಗ ಮುಗಿಸಿದರೆ ಆಕೆ ಓದುವ ಜಾಗದಲ್ಲಿ ಪುಸ್ತಕವನ್ನು ಓದಬಹುದು ಇತ್ಯಾದಿ.

**ಪುಸ್ತಕ-ಆಧಾರಿತ ಚಟುವಟಿಕೆಗಳು:**

ಈ ಜಾಗವನ್ನು ಪುಸ್ತಕಗಳ ಜೊತೆಗಿನ ಒಡನಾಟವನ್ನು ಹೆಚ್ಚಿಸುವ ಚಟುವಟಿಕೆಗಳಾದ ಬರೆಯುವುದು, ಪುಸ್ತಕಗಳ ಆಧಾರಿತ ಚಿತ್ರ ಬಿಡಿಸುವುದು ಅಥವಾ ಕಲೆ ಮತ್ತು ಕರಕುಶಲ ಚಟುವಟಿಕೆಗಳು, ಪುಸ್ತಕಗಳ ವಿಮರ್ಶೆಗಳನ್ನು ಬರೆಯುವುದು(ಪುಸ್ತಕದ ಒಳಗಿನ ಪುಟದ ಹೊದಿಕೆಯ ಮೇಲೆ ಅಥವಾ ಪುಸ್ತಕದ ಹೆಸರಿನೊಂದಿಗೆ, ಚಾರ್ಟಿನ ಮೇಲೆ ಸಣ್ಣ ಚೀಟಿಯಲ್ಲಿ ಅಂಟಿಸಿದ ಸರಳ ವಿವರಣೆಗಳಾಗಿರಬಹುದು) ಮುಂತಾದವುಗಳನ್ನು ಒಳಗೊಂಡಿರುವ ಅಥವಾ ಪುಸ್ತಕ-ಆಧಾರಿತ ಇತರ ಚಟುವಟಿಕೆಗಳಿಗೆ(ಚಿತ್ರ ಸಹಿತ ಪದಬಂಧಗಳು ಇತ್ಯಾದಿ) ಉಪಯೋಗಿಸಬಹುದು.

ಪುಸ್ತಕಗಳು ಮತ್ತು ಓದುವುದರ ಜೊತೆಗಿನ ಮಕ್ಕಳ ಒಡನಾಟವನ್ನು ಹೆಚ್ಚಿಸುವುದು ಇವುಗಳ ಉದ್ದೇಶವಾಗಿದೆ. ಆದ್ದರಿಂದ ಮಕ್ಕಳನ್ನು ಬರಮಾಡಿಕೊಳ್ಳುವಂತಹ ಒಂದು ಓದುವ ಜಾಗವನ್ನು ರೂಪಿಸಿ, ಮಕ್ಕಳ ಮನಸೆಳೆಯುವ ಓದುವ ಅನುಭವಗಳನ್ನು ನೀಡಿ. ಪುಸ್ತಕಗಳನ್ನು ಆಕರ್ಷಕ ರೀತಿಗಳಲ್ಲಿ ಪ್ರದರ್ಶಿಸಿ (ಉದಾಹರಣೆಗೆ ಮುಖ್ಯ ವಿಷಯಗಳ ಆಧಾರಿತ ಪುಸ್ತಕಗಳು-ಮಳೆ, ಹಕ್ಕಿಗಳು, ಗೆಳೆತನ, ಮೆಚ್ಚಿನ ಲೇಖಕರು, ಕ್ರೀಡೆಗಳು ಇತ್ಯಾದಿ ವಿಷಯಗಳನ್ನು ಆಧರಿಸಿದ), ಪುಸ್ತಕಗಳ ಆಧಾರಿತ ರೋಮಾಂಚಕ ಚಟುವಟಿಕೆಗಳನ್ನು ವ್ಯವಸ್ಥೆಗೊಳಿಸಿ. ನಿಮ್ಮ ಬಳಿ ಎಷ್ಟು ಪುಸ್ತಕಗಳಿವೆಯೋ ಅಷ್ಟರಿಂದಲೇ ಪ್ರಾರಂಭಿಸಿ, ನಿಧಾನವಾಗಿ ನಿಮ್ಮ ಸಂಗ್ರಹವನ್ನು ಹೆಚ್ಚಿಸಿಕೊಳ್ಳಿ. ನಿಮಗೆ ಅಗತ್ಯವಿರುವ ಮತ್ತು ಆಸಕ್ತಿಯಿರುವ ಭಾಷೆಗಳಲ್ಲಿ ಲಭ್ಯವಿರುವ ವಿವಿಧ ಪ್ರಕಾರಗಳ ಪುಸ್ತಕಗಳ ಬಗ್ಗೆ ಗಮನವಿರಲಿ.

**ಬರಹದ ಜಾಗವನ್ನು ರೂಪಿಸುವುದು/ಸಿದ್ಧಗೊಳಿಸುವುದು**

ಓದುವ ಜಾಗದ ಬದಿಯಲ್ಲೇ ಬರಹದ ಜಾಗವನ್ನು ನೀವು ರೂಪಿಸಬಹುದು. ಇಲ್ಲಿ ಮಕ್ಕಳು ಗೀಚಬಹುದು, ಚಿತ್ರ ಬಿಡಿಸಬಹುದು, ಬರೆಯಬಹುದು, ಕತ್ತರಿಸಿ ಅಂಟಿಸಬಹುದು, ಅಚ್ಚು ಒತ್ತಬಹುದು, ಇಲ್ಲವೇ ವಿವಿಧ ಮಾಧ್ಯಮಗಳು ಮತ್ತು ವಸ್ತುಗಳ ಮೂಲಕ ಮುದ್ರಣದ ಜೊತೆಗೆ ತಮ್ಮನ್ನು ತೊಡಗಿಸಿಕೊಳ್ಳಬಹುದು. ಸಣ್ಣ ಮಕ್ಕಳಲ್ಲಿ ಓದುವುದು, ಬರೆಯುವುದು, ಮಾತನಾಡುವುದು ಮತ್ತು ಆಲಿಸುವಿಕೆಯ ಬೆಳವಣಿಗೆಯು ಒಂದಕ್ಕೊಂದು ಸಂಬಂಧಿಸಿದಂತೆ ವಿವಿಧ ರೀತಿಯಲ್ಲಿ ಆಗುತ್ತಿರುವಾಗ (ಡೈಸನ್, ೧೯೮೮), ನೀವು ರೂಪಿಸಿದ ಯಾವುದೇ ಜಾಗ ಅಥವಾ ಸಾಕ್ಷರತೆಯ

ಕೇಂದ್ರವು ಮಕ್ಕಳ ಅಭಿವ್ಯಕ್ತಿ ಮತ್ತು ಸಂವಹನಗಳ ವಿವಿಧ ವಿಧಾನಗಳನ್ನು ಏಕಕಾಲದಲ್ಲಿ ಬಳಸಲು ಅನುವು ಮಾಡಿಕೊಡುವಂತಹವುಗಳಾಗಿರಬೇಕು.

**ಬರಹದ ಜಾಗಕ್ಕೆ ಸೂಚಿಸಿರುವ ವಸ್ತುಗಳು**

ಪೆನ್ಸಿಲ್‌ಗಳು(ನಿಯಮಿತವಾಗಿ ಬಳಸುವ ಮತ್ತು ಬಣ್ಣದ), ಸ್ಕೆಚ್ ಪೆನ್ನುಗಳು, ಕ್ರೆಯಾನ್‌ಗಳು, ಬಣ್ಣದ ಪೆನ್ಸಿಲ್‌ಗಳು, ಬಣ್ಣಗಳು, ಅಳಿಸುವ ಮತ್ತು ಪೆನ್ಸಿಲ್ ಚೂಪುಗೊಳಿಸುವ ಸಾಧನಗಳು ಮೊದಲಾದವುಗಳು

ಕಾಗದ, ರಟ್ಟಿನ ಹಾಳೆಗಳು ಮತ್ತು ಚಾರ್ಟ್ ಪೇಪರ್ (ಗೆರೆಯಿರುವ, ಗೆರೆಯಿರದ, ವಿವಿಧ ಗಾತ್ರಗಳ ಮತ್ತು ಬಣ್ಣಗಳ)

ನೋಟ್ ಪ್ಯಾಡ್‌ಗಳು, ನೋಟ್ ಪುಸ್ತಕಗಳು

ಸ್ಟೇಪ್ಲರ್‌ಗಳು ಮತ್ತು ಅಂಟು(ದೊಡ್ಡವರು ನಿರ್ವಹಿಸಬೇಕು)

ಸೀಮೆಸುಣ್ಣ(ಬಿಳಿಯ ಮತ್ತು ಬಣ್ಣದ)

ಸ್ಲೇಟ್ ಗಳು(ನಿಮ್ಮ ತರಗತಿಯ ಕೆಳಗಿನ ಗೋಡೆಯ ಮೇಲ್ಮೈಗೆ ಕಪ್ಪು ಹಲಗೆಯ ಬಣ್ಣವನ್ನು ಹಚ್ಚಿದ್ದರೆ, ಮಕ್ಕಳಿಗೆ ಅದರ ಮೇಲೆಯೇ ಬರೆಯಲು ಹೇಳಬಹುದು)

ನಾಟಕೀಯವಾಗಿ ಪುನಃ ಹೇಳುವ ಚಟುವಟಿಕೆಗೆ ಬೇಕಾದ ಗೊಂಬೆಗಳು ಮತ್ತು ರಂಗ ಪರಿಕರಗಳನ್ನು ಇಲ್ಲಿಯೂ ಇಡಬಹುದು.

ಸಾಧ್ಯವಾದರೆ ಹಿಡಿಕೆಯಿರುವ ಬೋರ್ಡುಗಳು ಅಥವಾ ಸಣ್ಣ ಮೇಜುಗಳನ್ನು ವಿದ್ಯಾರ್ಥಿಗಳಿಗೆ ಸುಲಭವಾಗಿ ಬರೆಯಲು ಸಾಧ್ಯವಾಗುವಂತೆ ಇಡಬಹುದು.

ಪದಗಳ ಗೋಡೆ, ವರ್ಣಮಾಲೆಯ ಪುಸ್ತಕಗಳು, ಚಿತ್ರಸಹಿತ ಶಬ್ದಕೋಶಗಳನ್ನು ಬರಹದ ಕೇಂದ್ರದ ಹತ್ತಿರ ಪ್ರದರ್ಶಿಸಿ. ಇದರಿಂದ ಮಕ್ಕಳಿಗೆ ಪರಾಮರ್ಶಿಸಲು ಅನುಕೂಲವಾಗುತ್ತದೆ.

ಮಕ್ಕಳು ಬಣ್ಣದಲ್ಲಿ ಅದ್ದಿ ಬಳಸುವಂತಹ ಅಚ್ಚುಗಳು. ಇವುಗಳು ಅಕ್ಷರಗಳು ಮತ್ತು ಸಂಖ್ಯೆಗಳ ಆಕಾರಗಳು, ಪ್ರಾಣಿಗಳು ಅಥವಾ ಮಕ್ಕಳ ಪರಿಸರದಲ್ಲಿರುವ ಇತರ ಯಾವುದೇ ಆಸಕ್ತಿದಾಯಕ ವಸ್ತುಗಳಾಗಿರಬಹುದು.

ಮಕ್ಕಳು ರಚನೆಗಳನ್ನು ಮಾಡಿದ ಮೇಲೆ ತೂಗು ಹಾಕಲು ಅನುಕೂಲವಾಗಲು ಬಟ್ಟೆಯ ಕ್ಲಿಪ್‌ಗಳು ಮತ್ತು ಕೇಂದ್ರದಲ್ಲಿ ಅಡ್ಡಲಾಗಿ ಕಟ್ಟಿರುವ ದಾರ

**ಬರಹದ ಜಾಗಕ್ಕೆ ಸೂಚಿಸಿರುವ ಚಟುವಟಿಕೆಗಳು**

**ಸಹಭಾಜಿತ ಬರವಣಿಗೆ**

ನೀವು ಮಕ್ಕಳಿಗೆ ಸಹಭಾಜಿತ (shared) ಕಥನ/ಅವರು ರಚಿಸಿದ ಕಥೆಯನ್ನು ಬರೆಯುವುದು ಹೇಗೆಂದು ತೋರಿಸಿಕೊಡಿ. ಅವರು ಯಾವ ಮಟ್ಟದಲ್ಲಿದ್ದಾರೆಯೋ ಅದರ ಆಧಾರದ ಮೇಲೆ ಒಂದು ಚಾರ್ಟ್ ಪೇಪರಿನ ಮೇಲೆ

ಯಾವುದಾದರೂ ಒಂದು ಅಕ್ಷರ, ಪದ, ವಿರಾಮ ಚಿಹ್ನೆ ಅಥವಾ ಒಂದು ನುಡಿಗಟ್ಟನ್ನು ಬರೆಯುವಂತೆ ಅವರನ್ನು ಆಹ್ವಾನಿಸಿ. ಬರಹದ ಜಾಗದಲ್ಲಿ ಈ ಚಾರ್ಟುಗಳನ್ನು ಪ್ರದರ್ಶಿಸಿ. ಇವುಗಳನ್ನು ಸಹಪಠನಗಳಲ್ಲೂ ಬಳಸಬಹುದು. ಮಕ್ಕಳು, ಉದಯೋನ್ಮುಖ ಬರಹಗಾರರು ತಮ್ಮದೇ ರೀತಿಯಲ್ಲಿ ಒಂದು ಘಟನೆಯನ್ನು ಅಥವಾ ಕಥೆಯನ್ನು ಪದಗಳು ಮತ್ತು ಚಿತ್ರಗಳ ಮೂಲಕ ಬರೆಯುವ ಪ್ರಯತ್ನ ಮಾಡಬಹುದು.

**ಮಾರ್ಗದರ್ಶಿತ ಮತ್ತು ಮುಕ್ತ ಬರಹದ ಸಮಯ:**

ಕಥೆಗಳು, ಪದ್ಯಗಳು, ಭಿತ್ತಿಪತ್ರಗಳು, ಗುರುತಿನ ಚೀಟಿಗಳು ಅಥವಾ  ತರಗತಿಯ ಮೊಯಮಗಳ ಪಟ್ಟಿ, ಪತ್ರ ಅಥವಾ ಹುಟ್ಟುಹಬ್ಬವೊಂದರ ಕಾರ್ಡು ಮೊದಲಾದ ಮಕ್ಕಳ ಬರಹದ ಪ್ರಯತ್ನಗಳನ್ನು ಪ್ರೋತ್ಸಾಹಿಸಿ, ನೆರವು ನೀಡಿ. ಮಾರ್ಗದರ್ಶಿತ ಬರಹದಲ್ಲಿ ಮಕ್ಕಳಿಗೆ ಬರೆಯಲು ನೀವು ಒಂದು ಉದ್ದೇಶವನ್ನು ಕೊಟ್ಟು ಅದರ ಬಗ್ಗೆ ಕ್ಷಿಪ್ರವಾಗಿ ಪಾಠವೊಂದನ್ನು ಬೋಧಿಸಿ. ಉದಾಹರಣೆಗೆ, ಅವರಿಗೆ ತಮಗೆ ಇಷ್ಟವಾದ ಸಂಜೆಯ ತಿಂಡಿಯನ್ನು ತಯಾರಿಸುವ ವಿಧಾನವನ್ನು ಬರೆಯಲು ಹೇಳಿ. ಪಾಕವಿಧಾನದ ವಿವಿಧ ಭಾಗಗಳು ಮತ್ತು ಅವುಗಳ ಉದ್ದೇಶವನ್ನು ಮಕ್ಕಳಿಗೆ ತಿಳಿಸಿ, ಒಂದು ಉದಾಹರಣೆಯನ್ನು ಅವರಿಗೆ ತೋರಿಸಿ. ಮಕ್ಕಳು ಅವರಿಗೆ ಕೊಟ್ಟ ಭಾಗಗಳ ಮೇಲೆ ಸ್ವತಂತ್ರವಾಗಿ ಕೆಲಸ ಮಾಡಬಹುದು. ಅವರು ಬರೆಯುತ್ತಿರುವಾಗ ನೀವು ಸುತ್ತಮುತ್ತ ನಡೆದಾಡುತ್ತಾ ಅವರು ಏನು ಬರೆಯುತ್ತಿದ್ದಾರೆ ಎಂಬುದರ ಬಗ್ಗೆ ಅವರೊಂದಿಗೆ ಮಾತನಾಡಿ, ಅದರ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಹಂಚಿಕೊಳ್ಳಿ. ಈ ಹಂತದಲ್ಲಿ ಅರ್ಥದ ಬಗ್ಗೆ ಗಮನ ನೀಡಿ. ಕಾಗುಣಿತ ಮತ್ತು ಇತರ ಶಿಷ್ಟಾಚಾರಗಳ ಬಗ್ಗೆ ಚಿಂತಿಸುವುದು ಬೇಡ. ಮಕ್ಕಳಿಗೆ ಶಿಷ್ಟಾಚಾರ ಅನುಸರಿಸಲು ಬರುವವರೆಗೆ ಅವರು ಚಿತ್ರ ಮತ್ತು ಬರಹ ಎರಡನ್ನೂ ಬೆರೆಸಬಹುದು. ಮಕ್ಕಳ ಬರಹಗಳನ್ನು ಬರಹದ ಜಾಗದಲ್ಲಿ ಪ್ರದರ್ಶಿಸಿ.

**ಸೀಮೆಸುಣ್ಣದ ಮಾತುಕತೆಗಳು**

ನೀವು ಕಥೆಯನ್ನು ಹೇಳುತ್ತಿರುವಾಗ ಅಥವಾ ಓದುತ್ತಿರುವಾಗ ಬೋರ್ಡಿನ ಮೇಲೆ ಅಥವಾ ಚಾರ್ಟ್ ಪೇಪರಿನ ಮೇಲೆ ಕಥೆಯ ಚಿತ್ರವನ್ನು ಬಿಡಿಸಿ. ಇದು ಮಕ್ಕಳಿಗೆ ಕಥೆಯನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ ಹಾಗೂ ಮಕ್ಕಳು ತಾವು ಆಲಿಸಿದ ಕಥೆಯನ್ನು ಪುನಃ ಹೇಳುವಾಗ ಇದನ್ನೇ ಪ್ರಯತ್ನಿಸಬಹುದು(ನಾಟಕೀಯವಾಗಿ ಪುನಃ ಹೇಳುವುದಕ್ಕೆ ಬೊಂಬೆಗಳು ಮತ್ತು ರಂಗ ಪರಿಕರಗಳು ಇದೇ ರೀತಿ ಸಹಾಯ ಮಾಡುತ್ತವೆ).

## ಸೃಜನಾತ್ಮಕ ಬರಹದ ಜಾಗದ ಪರಿಕಲ್ಪನೆಗಳು


ಬರಹವು ನೀರಸವಾಗಿರಬೇಕಿಲ್ಲ! ಬರಹದ ಜಾಗದಲ್ಲಿ ಮಕ್ಕಳ ಕಲ್ಪನಾ ಶಕ್ತಿಯನ್ನು ಉದ್ದೀಪಿಸಲು ನೀವು ಹೆಚ್ಚು ಸೃಜನಶೀಲರಾಗಿರಬಹುದು[5]. ನಿಮಗಾಗಿ ನಾವು ಕೆಲವು ಕಲ್ಪನೆಗಳನ್ನು ಸಂಗ್ರಹಿಸಿ ಕೊಟ್ಟಿದೇವೆ.

[5] ಪುಸ್ತಕಗಳನ್ನು ರಚಿಸುವ ಚಟುವಟಿಕೆಯನ್ನು ಹೊರತುಪಡಿಸಿ, ಉಳಿದೆಲ್ಲಾ ಆಲೋಚನೆಗಳನ್ನು https://www.weareteachers.com/writing-center-ideas/ Books ರಿಂದ ತಗೆದುಕೊಳ್ಳಲಾಗಿದೆ-

ಮಕ್ಕಳಿಗೆ ತಮ್ಮ ಕಥೆಪುಸ್ತಕಗಳನ್ನು ರಚಿಸಲು ಸಹಾಯ ಮಾಡಿ[6]: ನೀವು ಪುಸ್ತಕದ ಪುಟಗಳಲ್ಲಿ ಅವರಿಗಾಗಿ ಬರೆದು, ಮಕ್ಕಳು ಚಿತ್ರೀಕರಿಸುವ ಕಥೆಗಳು ಅವರದೇ ಆಗಿರಬಹುದು. ದೊಡ್ಡ ಮಕ್ಕಳು ತಾವೇ ಸ್ವತಃ ಸಂಶೋಧಿಸಿದ ಕಾಗುಣಿತಗಳಿಂದ ಅವುಗಳನ್ನು ಬರೆಯಬಹುದು. ಮಕ್ಕಳು ಒಬ್ಬರ ಕಥೆಯನ್ನು ಇನ್ನೊಬ್ಬರು ಆಲಿಸಲು ಮತ್ತು ಪ್ರತಿಕ್ರಿಯೆ ನೀಡಲು ಅವಕಾಶ ನೀಡಿ. ಮಕ್ಕಳು ತಾವೇ ಓದಿಕೊಳ್ಳಲು ಮತ್ತು ಪರಸ್ಪರ ಒಬ್ಬರಿಗೊಬ್ಬರು ಓದಿಕೊಳ್ಳುವುದಕ್ಕಾಗಿ ಈ ಪುಸ್ತಕಗಳನ್ನು ತರಗತಿಯಲ್ಲಿ ಪ್ರದರ್ಶಿಸಿ.

### ಮಕ್ಕಳು ಬರಹವನ್ನು ಪ್ರಾರಂಭಿಸಲು ವಿವಿಧ ರೀತಿಯ ಬರಹದ ಸ್ಟೆನ್ಸಿಲ್‌ಗಳನ್ನು ರಚಿಸುವುದು

ಮಕ್ಕಳು ತಮ್ಮ ಬರವಣಿಗೆಯಲ್ಲಿ ಬಳಸಲು ಸಾಧ್ಯವಾಗುವಂತಹ ಮುಖ್ಯ ಪದಗಳನ್ನು ಶಿಕ್ಷಕರು ಸ್ಟೆನ್ಸಿಲ್ ಮೇಲೆ ಕೊಟ್ಟಿರುವುದನ್ನು ಚಿತ್ರ 13 ತೋರಿಸುತ್ತದೆ. ಮಕ್ಕಳು ಸ್ಟೆನ್ಸಿಲ್‌ವೊಂದನ್ನು ಆರಿಸಿಕೊಂಡು, ಚಿತ್ರದ ಮೇಲೆ ತಿದ್ದಿ, ತಮ್ಮ ಕಲ್ಪನೆಗಳನ್ನು ಗುಂಪಿನಲ್ಲಿ ಚರ್ಚಿಸಿ, ತಮ್ಮ 'ಸ್ಟೆನ್ಸಿಲ್ ಕಥೆಗಳನ್ನು' ಒಂದು ಹಾಳೆಯ ಮೇಲೆ ಬರೆಯುತ್ತಾರೆ.



ಚಿತ್ರ 13. ಸ್ಟೆನ್ಸಲ್ ಬರಹ, www.weareteachers.com

### 'ಕಥೆಯ ಚೀಲಗಳು' ಹಾಗೂ 'ಕಥೆಯ ಜಾಡಿಗಳ"ನ್ನು ಬರಹದ ಜಾಗದಲ್ಲಿಡಿ

. ಪ್ರತಿಯೊಂದು ಕಥೆಯ ಚೀಲವು(ಉದಾ: ಕಥೆಯ ಚೀಲ #1, #2 ಇತ್ಯಾದಿ) ಪ್ರತಿದಿನ ಬಳಸುವ ವಸ್ತುಗಳ ವಿಚಿತ್ರ ಸಂಯೋಜನೆಗಳ ಚಿತ್ರಗಳು/ಹೆಸರುಗಳನ್ನು ಒಳಗೊಂಡಿದ್ದು ರಚನಾತ್ಮಕ ಕಲ್ಪನೆಗಳನ್ನು ಉದ್ದೀಪಿಸುತ್ತದೆ. ಕಥೆಯ ಜಾಡಿಯಲ್ಲಿ ಹಲವು ಚೀಟಿಗಳಿರುತ್ತವೆ. ಪ್ರತಿಯೊಂದು ಚೀಟಿಯು ಒಂದು ಕಥೆಯ ಪ್ರಾರಂಭವನ್ನು ಹೊಂದಿರುತ್ತದೆ. ಮಕ್ಕಳು ಒಂದೊಂದು ಚೀಟಿಯನ್ನು ತೆಗೆದುಕೊಂಡು ಆ ಕಲ್ಪನೆಯ ಮೇಲೆ ಕಥೆಯನ್ನು ರೂಪಿಸುತ್ತಾರೆ. ಇದೇ ಕಲ್ಪನೆಗಳನ್ನು ಕವನಗಳನ್ನು ಬರೆಯಲು ಸಹ ಉಪಯೋಗಿಸಬಹುದು.

---

[6] ಹೆಚ್ಚಿನ ಆಲೋಚನೆಗಳು ಮತ್ತು ಉದಾಹರಣೆಗಳಿಗೆ, ELI's Brief on "Children's Writing: Creating Books in the Classroom" ಅನ್ನು ನೋಡಿ.

**ವಿಷಯ-ಆಧಾರಿತ ಅಭಿನಯದ ಆಟಗಳನ್ನು ಆಡಲು ಬರಹದ ಜಾಗವನ್ನು ಅಳವಡಿಸಿ.**

ಚಿತ್ರ 14ರಲ್ಲಿ ಸರಳ ಬದಲಾವಣೆಗಳೊಂದಿಗೆ ತಾತ್ಕಾಲಿಕವಾಗಿ ಬರಹದ ಜಾಗವನ್ನು ಅಂಚೆಕಛೇರಿಯನ್ನಾಗಿ ಮಾಡಲಾಗಿರುವ ಉದಾಹರಣೆಯನ್ನು ತೋರಿಸಲಾಗಿದೆ. ಇದರಲ್ಲಿ ಖಾಲಿ ಹಾಳೆ, ಪೋಸ್ಟ್-ಕಾರ್ಡುಗಳು, ಕವರ್ಗಳು, ಶುಭಾಶಯ ಪತ್ರಗಳು, ಸ್ಟ್ಯಾಂಪ್‌ಗಳು, ಅಂಟು, ಅಂಚೆಪೆಟ್ಟಿಗೆ ಮುಂತಾದವುಗಳು ಇವೆ. ಇವುಗಳಿಗೆ ಗುರುತು ಪಟ್ಟಿಗಳನ್ನು ಅಂಟಿಸಿ, 'ಅಂಚೆ ಕಛೇರಿ'ಯನ್ನು ಬಳಸಲು ಸರಳ ಸೂಚನೆಗಳನ್ನು ಬರೆಯಿರಿ. ವಿದ್ಯಾರ್ಥಿಗಳು ಪತ್ರಗಳು, ಶುಭಾಶಯ ಪತ್ರಗಳನ್ನು ಬರೆದು ಕಳಿಸುವುದು, ಕವರುಗಳು ಮೇಲೆ ವಿಳಾಸಗಳನ್ನು ಬರೆಯುವುದು, ಸರಳ ಫಾರ್ಮ್‌ಗಳನ್ನು ತುಂಬುವುದು ಮೊದಲಾದವುಗಳನ್ನು ಮಾಡಬಹುದು. ಅವರನ್ನು ಉದ್ದೇಶಿಸಿ ಬರೆದ ಪತ್ರಗಳನ್ನು ತರಗತಿಯ ಮುಂದೆ ಓದಬಹುದು. ಈ ರೀತಿಯಲ್ಲಿ ವಿದ್ಯಾರ್ಥಿಗಳು ಓದುವುದು, ಬರೆಯುವುದು, ಆಲೋಚಿಸುವುದು, ಕಲ್ಪನೆ ಮೊದಲಾದವುಗಳಲ್ಲಿ ಆಟದ ಚಟುವಟಿಕೆಗಳ ಮೂಲಕ ತೊಡಗಿಸಿಕೊಳ್ಳಬಹುದು.




ಚಿತ್ರ 14. ವಿಷಯಾಧಾರಿತ ಬರಹದ ಕೇಂದ್ರ www.weareteachers.com

## ಪದಾಭ್ಯಾಸದ ಜಾಗವನ್ನು ರೂಪಿಸುವುದು

ಸಣ್ಣ ಮಕ್ಕಳು ಓದುವುದು ಮತ್ತು ಬರೆಯುವುದನ್ನು ಕಲಿಯುವ ಪ್ರಕ್ರಿಯೆಯಲ್ಲಿ ಶಬ್ದಗಳು ಮತ್ತು ಚಿಹ್ನೆಗಳು ಹೇಗೆ ಪರಸ್ಪರ ಸಂಬಂಧಿಸಿವೆ ಎಂದು ಆಲೋಚಿಸಲು ಅವರಿಗೆ ಪದಗಳನ್ನು ಬೇರ್ಪಡಿಸುವ ಮತ್ತು ರೂಪಿಸುವ ಹಲವಾರು ಸಂದರ್ಭಗಳ ಅವಶ್ಯಕತೆಯಿರುತ್ತದೆ. ಪದಾಭ್ಯಾಸದ ಜಾಗವು ಪದಗಳನ್ನು ಬಿಡಿಸುವ ಇಂತಹ ಸ್ಥಳವಾಗಬಹುದು[7], ತಾತ್ವಿಕವಾಗಿ ಪದಾಭ್ಯಾಸ ಮಾಡಲು ಪ್ರತ್ಯೇಕ ಜಾಗವೇ ನಿಮಗೆ ಬೇಕಾಗುತ್ತದೆ. ಆದರೆ ನಮ್ಮ ತರಗತಿಗಳಲ್ಲಿ

---

[7] ಈ ಕರಪತ್ರದಲ್ಲಿ ನಾವು ಕೆಲವೇ ಕೆಲವು ಚಟುವಟಿಕೆಗಳನ್ನು ವಿವರಿಸಿದ್ದೇವೆ. ಪದಗಳನ್ನು ಬಿಡಿಸುವುದರ ಬಗೆಗಿನ ಹೆಚ್ಚಿನ ಮಾಹಿತಿಗಾಗಿ ಮತ್ತು ಅದನ್ನು ಬೆಂಬಲಿಸುವ ತರಗತಿಯ ಚಟುವಟಿಕೆಗಳಿಗಾಗಿ ELI's Brief on 'Learning the Script' ಅನ್ನು ಪರಾಮರ್ಶಿಸಿ.

ಸ್ಥಳಾವಕಾಶದ ಮಿತಿಗಳ ನಿರ್ಬಂಧಗಳಿಂದ ನೀವು ಬರಹದ ಜಾಗದ ಜೊತೆಗೇ ಇದನ್ನು ಸೇರಿಸಬಹುದು. ನಾವು ಕೆಳಗೆ ವಿವರಿಸಿದ ಚಟುವಟಿಕೆಗಳಲ್ಲಿ ಮಕ್ಕಳು ಪಾಲ್ಗೊಂಡಾಗ ಅಕ್ಷರಗಳು ಮತ್ತು ಪದಗಳ ಶಬ್ದಗಳ ಉಚ್ಚಾರಣೆಯನ್ನು ದಯವಿಟ್ಟು ಅವರಿಗೆ ತೋರಿಸಿ, ಅದನ್ನು ಮಾಡುವಂತೆ ಅವರನ್ನು ಪ್ರೋತ್ಸಾಹಿಸಿ.

## ಪದಾಭ್ಯಾಸದ ಜಾಗಕ್ಕೆ ಸೂಚಿಸಿರುವ ವಸ್ತುಗಳು

ಅಕ್ಷರಗಳ ಕಾರ್ಡುಗಳು, ಅವುಗಳನ್ನು ತೂಗು ಹಾಕಲು ಬೇಕಾದ ತಂತಿ ಮತ್ತು ಕ್ಲಿಪ್‌ಗಳು(ಅಗತ್ಯವಿದ್ದಲ್ಲಿ). ಭಾರತೀಯ ಭಾಷೆಗಳಿಗೆ ಚಿತ್ರ 15ರಲ್ಲಿ ತೋರಿಸಿರುವಂತೆ ಆರಂಭದಿಂದ ಕಾಗುಣಿತವಿರುವ ಅಕ್ಷರಗಳ ಕಾರ್ಡುಗಳನ್ನು ರಚಿಸುವುದು ಸೂಕ್ತ. ಇಂಗ್ಲಿಷ್ ಭಾಷೆಗಾಗಿ ಸ್ವರಗಳು ಮತ್ತು ಹೆಚ್ಚು ಬಳಸುವ ವ್ಯಂಜನಗಳ ಕಾರ್ಡುಗಳನ್ನು ಇಟ್ಟುಕೊಳ್ಳುವುದು ಸಮಂಜಸ.

ಅಕ್ಷರಗಳ ಬ್ಲಾಕ್‌ಗಳು(ಪಡಿಯಚ್ಚು ಮುದ್ರಣಕ್ಕಾಗಿ)

ಅಕ್ಷರಗಳ ಆಕಾರಗಳನ್ನು ತಿದ್ದಲು ಮರಳು ತುಂಬಿರುವ ಟ್ರೇಗಳು

ಜೇಡಿಮಣ್ಣು ಅಥವಾ ಆಟಕ್ಕಾಗಿ ಕಲಸಿದ ಹಿಟ್ಟು

ಕಾಗದ ಮತ್ತು ರಟ್ಟಿನ ಹಾಳೆಗಳು(ಖಾಲಿ ಮತ್ತು ಗೆರೆಗಳಿರುವ)

ಬರಹದ ಸಾಮಗ್ರಿಗಳು(ಅಚ್ಚುಗಳು,ಪೆನ್ಸಿಲ್ಲುಗಳು,ಕ್ರೆಯಾನ್‌ಗಳು, ರಬ್ಬರುಗಳು ಇತ್ಯಾದಿ)




ಚಿತ್ರ 15. ಅಕ್ಷರದ ಕಾರ್ಡುಗಳು

ವಿವಿಧ ರೀತಿಯ ವಸ್ತುಗಳನ್ನು ಉಪಯೋಗಿಸಿ ಅಕ್ಷರಗಳ ಆಕಾರಗಳನ್ನು ಕತ್ತರಿಸಿ: ಉದಾ: ವೆಲ್ವೆಟ್ ಪೇಪರ್, ಮರಳು ಕಾಗದ, ಸ್ಪಂಜು ಇತ್ಯಾದಿ. ಮಕ್ಕಳು ಈ ಅಕ್ಷರಗಳನ್ನು ಮುಟ್ಟಿ, ತಿರುಗಿಸಿ, ಅಕ್ಷರಗಳ ಆಕಾರಗಳ ಬಗ್ಗೆ ಹೇಗೆ ಕಲಿಯುತ್ತಾರೆ ಎಂಬುದನ್ನು ಚಿತ್ರ 16 ತೋರಿಸುತ್ತದೆ.



ಚಿತ್ರ 16. ಮುಂಬೈನ ಸಜಗ್ ಫೌಂಡೇಶನ್‌ನಲ್ಲಿ, ಕಾಗದ ಮುಂತಾದವುಗಳಿಂದ ಕತ್ತರಿಸಿ ತೆಗೆದ ಅಕ್ಷರಗಳ ಚಿತ್ರವನ್ನು ಬಳಸುತ್ತಿರುವ ಮಕ್ಕಳು ಮತ್ತು ಬೆಂಗಳೂರಿನ ಹೆಚ್‌ಬಿಪಿ ಇಂಡಿಯನ್ ಸ್ಕೂಲಿನಲ್ಲಿ ಕಾರ್ಯನಿರತರಾಗಿರುವ ಮಕ್ಕಳು

ಶಿಕ್ಷಕರ ಹೆಸರನ್ನು ಒಳಗೊಂಡಂತೆ ತರಗತಿಯಲ್ಲಿನ ಪ್ರತಿಯೊಬ್ಬರ ಹೆಸರಿನ ಚೀಟಿ

ವರ್ಣಮಾಲೆಯ ಪುಸ್ತಕಗಳು, ಪ್ರಾಸಪದದ ಪುಸ್ತಕಗಳು, ಹತ್ತಿರದಲ್ಲಿ ಪ್ರದರ್ಶಿಸಿದ ಪದಗೋಡೆಗಳು

ಇಂಗ್ಲೀಷ್ ಬೋಧಿಸುತ್ತಿದ್ದರೆ, ಪದಗುಂಪು(wordfamily)ಗಳಿಗೆ ಮಗುಚುವ ಅಥವಾ ಹಿಂದಕ್ಕೂ ಮುಂದಕ್ಕೂ ಎಳೆಯುವ ಪುಸ್ತಕಗಳನ್ನು ಉಪಯೋಗಿಸಬಹುದು. ರಟ್ಟಿನ ಹಾಳೆಗಳನ್ನು ಬಳಸಿ, ನಿಮ್ಮದೇ ಪುಸ್ತಕವನ್ನು ಚಿತ್ರ 17ರಲ್ಲಿ ತೋರಿಸಿರುವಂತೆ ಸುಲಭವಾಗಿ ಮಾಡಿಕೊಳ್ಳಬಹುದು.




ಚಿತ್ರ 17. ಮಗುಚುವ ಅಥವಾ ಹಿಂದಕ್ಕೂ ಮುಂದಕ್ಕೂ ಎಳೆಯುವ, ಪದಗುಂಪುಗಳನ್ನೊಳಗೊಂಡ ಪುಸ್ತಕಗಳು. www.iheartliteracy.com; www.teacherspayteachers.com; www.differentiatedkindergarten.com

ವಿವಿಧ ಅಕ್ಷರಗಳಿಂದ ಪ್ರಾರಂಭವಾಗುವಂತಹ ಸಣ್ಣ ಆಟಿಕೆಗಳು ಮತ್ತು ಚಿತ್ರದ ಕಾರ್ಡುಗಳು. ಪ್ರತಿಯೊಂದು ಅಕ್ಷರಕ್ಕೂ ನೀವು ಸ್ಪಷ್ಟವಾಗಿ ಕಾಣಿಸುವಂತಹ ಪಾರದರ್ಶಕ ಚೀಲಗಳನ್ನು ಉಪಯೋಗಿಸಬಹುದು. ಅವುಗಳ ಮೇಲೆ ಗುರುತು ಮಾಡಿ ಈ ವಸ್ತುಗಳನ್ನು ವಿಂಗಡಿಸಿ ಆ ಚೀಲಗಳಲ್ಲಿ ಇಡಬಹುದು.

**ಪದಾಭ್ಯಾಸದ ಜಾಗಕ್ಕೆ ಸೂಚಿಸಿರುವ ಚಟುವಟಿಕೆಗಳು**

ಚಿಕ್ಕ ಮಕ್ಕಳು ಅಕ್ಷರಗಳ ಅಚ್ಚನ್ನು ಹಾಳೆಯ ಮೇಲೆ ಒತ್ತಬಹುದು. ದೊಡ್ಡ ಮಕ್ಕಳು ಅಕ್ಷರಗಳ ಆಕಾರಗಳನ್ನು ಮರಳಿನ ಮೇಲೆ ತಿದ್ದಬಹುದು ಅಥವಾ ಜೇಡಿಮಣ್ಣು ಅಥವಾ ಆಟದ ಹಿಟ್ಟಿನಿಂದ ಅಕ್ಷರಗಳ ಆಕಾರಗಳನ್ನು ಮಾಡಬಹುದು.

ಮಕ್ಕಳಿಗೆ ತಮ್ಮ ಹೆಸರಿನಲ್ಲಿರುವ ಅಕ್ಷರಗಳನ್ನು ಒಂದು ಗುಂಪನ್ನಾಗಿ ಉಳಿದ ಅಕ್ಷರಗಳನ್ನು ಇನ್ನೊಂದು ಗುಂಪನ್ನಾಗಿ ವಿಂಗಡಿಸಲು ಹೇಳಿ. ಅದೇ ರೀತಿ ತಮ್ಮ ಸ್ನೇಹಿತರ ಮತ್ತು ಶಿಕ್ಷಕರ ಹೆಸರುಗಳ ಅಕ್ಷರಗಳನ್ನು ಅವರು ವಿಂಗಡಿಸಬಹುದು. ಈ ಚಟುವಟಿಕೆಗೆ ಮಕ್ಕಳು ಹೆಸರಿನ ಚಾರ್ಟುಗಳು ಅಥವಾ ಹೆಸರಿನ ಚೀಟಿಯನ್ನು ಪರಾಮರ್ಶಿಸಬಹುದು.

ಒಂದು ರಟ್ಟಿನ ಹಾಳೆಯ ಮೇಲೆ ಪ್ರತಿಯೊಂದು ಮಗುವಿನ ಹೆಸರನ್ನು ಬರೆದು ಅದನ್ನು ಕತ್ತರಿಸಿ ತೆಗೆಯಿರಿ. ಕತ್ತರಿಸಿದ ತುಂಡುಗಳನ್ನು ಒಂದು ಚೀಲದಲ್ಲಿ ಇಟ್ಟು ಅದರ ಮುಂದೆ ಮಗುವಿನ ಹೆಸರನ್ನು ಬರೆಯಿರಿ. ಮಕ್ಕಳು ಅಕ್ಷರಗಳ ಜೊತೆ ಆಟವಾಡಿ ತಮ್ಮ ಹೆಸರಿನ ಕಾಗುಣಿತವನ್ನು ಉಚ್ಚರಿಸುತ್ತಾರೆ.

ಇದೇ ರೀತಿ ಪದಗಳನ್ನು ರಟ್ಟಿನ ಹಾಳೆಗಳ ಮೇಲೆ ಬರೆದು, ಮಧ್ಯದಲ್ಲಿ ವಿಭಿನ್ನವಾಗಿ ಕತ್ತರಿಸುವುದು(ಜಿಗ್ ಜಾಗ್ ರೀತಿಯಲ್ಲಿ, ಡೊಂಕಾಗಿ). ಮಕ್ಕಳು ಈ ಪದ ಭಾಗಗಳನ್ನು ಒಟ್ಟಿಗೆ ಜೋಡಿಸಿ ಅವುಗಳನ್ನು ಹೆಸರಿಸುವ ಪ್ರಯತ್ನ ಮಾಡುತ್ತಾರೆ.

ಮಕ್ಕಳು ಚಿತ್ರ-ಶಬ್ದ-ಅಕ್ಷರಗಳನ್ನು ಹೊಂದಿಸುವ ಆಟದಲ್ಲಿ ತೊಡಗಬಹುದು. ವಿವಿಧ ಶಬ್ದಗಳಿಂದ ಪ್ರಾರಂಭವಾಗುವ ವಸ್ತುಗಳ ಚಿತ್ರಗಳನ್ನು ನೀವು ಒಂದು ಚೀಲದಲ್ಲಿಡಬಹುದು. ಮಕ್ಕಳು ಅವುಗಳನ್ನು ಹೊರತೆಗೆದು ಪ್ರಾರಂಭದಲ್ಲಿರುವ ಅಕ್ಷರದ ಶಬ್ದದ ಆಧಾರದ ಮೇಲೆ ಅವುಗಳನ್ನು ವಿಂಗಡಿಸುತ್ತಾರೆ. ಅವರು ಅವನ್ನು ವಿಂಗಡಿಸುತ್ತಲೇ ಶಬ್ದವನ್ನು ಉಚ್ಚರಿಸಬೇಕು. ನಂತರ ಅವರು ಆ ಕಾರ್ಡುಗಳನ್ನು ಆ ಅಕ್ಷರದ ಕತ್ತರಿಸಿದ ಆಕಾರದ ಮುಂದೆ ಅಥವಾ ಆ ಅಕ್ಷರದ ಗುರುತಿರುವ ಬಟ್ಟಲಿನ ಒಳಗೆ ಅಥವಾ ಚಿತ್ರ 18ರಲ್ಲಿ ತೋರಿಸಿರುವಂತೆ ಪ್ರತಿಯೊಂದು ಅಕ್ಷರಕ್ಕೆ ಪ್ರತ್ಯೇಕ ಸ್ಥಳವನ್ನು ಗುರುತು ಮಾಡಿದ ಚಾರ್ಟಿನ ಮೇಲೆ ಇಡಬಹುದು. ಇದೇ ರೀತಿ ಪದಗಳ ಕೊನೆಯ ಶಬ್ದಗಳನ್ನಾಧಾರಿತ ಚಟುವಟಿಕೆಗಳನ್ನು ಮಾಡಬಹುದು.



ಚಿತ್ರ 18. ಮಕ್ಕಳು ಚಿತ್ರಗಳ ಕಾರ್ಡುಗಳನ್ನು ಪ್ರಾರಂಭದ ಶಬ್ದ ಮತ್ತು ಅಕ್ಷರಗಳ ಜೊತೆಗೆ ಹೊಂದಿಸುತ್ತಿರುವುದು.

ಮಕ್ಕಳು ಅಕ್ಷರಗಳ ಕಾರ್ಡುಗಳನ್ನು ವರ್ಣಮಾಲೆಯ ಅಥವಾ ತಮ್ಮ ಹೆಸರು ಅಥವಾ ತಮ್ಮ ಸ್ನೇಹಿತರ ಹೆಸರಿನಲ್ಲಿ ಅವು ಕಂಡುಬರುವ ಅನುಕ್ರಮದಲ್ಲಿ (sequence) ತಂತಿಯ ಮೇಲೆ ತೂಗು ಹಾಕುವಂತೆ ಅಥವಾ ಅವನ್ನು ಚಾಪೆಯ ಮೇಲಿಡುವಂತೆ ಹೇಳಬಹುದು. ದೊಡ್ಡ ಮಕ್ಕಳು ಈ ಅಕ್ಷರಗಳ ಕಾರ್ಡುಗಳಿಂದ ಪದಗಳನ್ನು ಮಾಡಬಹುದು. ಮಕ್ಕಳು ಇದಕ್ಕಾಗಿ ಪುಸ್ತಕಗಳು, ಪದಗೋಡೆಗಳು, ಚಿತ್ರಸಹಿತ ಶಬ್ದಕೋಶಗಳು ಮತ್ತು ಇಂತಹವುಗಳನ್ನು ಆಧಾರವಾಗಿ ಬಳಸಬಹುದು. ಚಿತ್ರ 19 ಇಂತಹ ಪರಿಕಲ್ಪನೆಯ ಆಧಾರದಲ್ಲಿ ಪದವನ್ನು ರೂಪಿಸುವ ಆಟವನ್ನು ತೋರಿಸುತ್ತದೆ.



ಚಿತ್ರ 19 ಮಕ್ಕಳು ಕರ್ನಾಟಕದ ನಲಿ-ಕಲಿ ತರಗತಿಯಲ್ಲಿ ಪದಗಳನ್ನು ರೂಪಿಸುವ ಆಟವಾಡುತ್ತಿರುವುದು, ಕರ್ನಾಟಕ

ಇಂಗ್ಲಿಷ್‌ಗಾಗಿ ಪ್ರತಿಯೊಂದು ಪದಗಳ ಗುಂಪಿಗೆ ವಿದ್ಯಾರ್ಥಿಗಳು ಮಗುಚುವ ಪುಸ್ತಕಗಳು ಅಥವಾ ತಿರುಗಿಸುವ ಪುಸ್ತಕಗಳನ್ನು ಬಳಸಿ, ಪ್ರತಿಯೊಂದು ತಿರುಗುವ ಪುಟದಲ್ಲಿರುವ ಪದಗಳನ್ನು ಹೇಳಬಹುದು ಅಥವಾ ಬರೆಯಬಹುದು.

ನೀವು ಸರಳ, ಪ್ರಸಿದ್ಧ ಕವಿತೆಗಳನ್ನು ಒಂದು ಚಾರ್ಟಿನ ಮೇಲೆ ಬರೆದು, ಅದರಿಂದ ವಾಕ್ಯಗಳನ್ನು ಮತ್ತು ಪದಗಳನ್ನು ಕತ್ತರಿಸಿ ತೆಗೆಯಬಹುದು. ಮಕ್ಕಳು ಅದಕ್ಕೆ ತಕ್ಕ ಕವಿತೆಯ ಚಿತ್ರಪಟವನ್ನು ನೋಡಿಕೊಂಡು ವಾಕ್ಯಗಳು/ಪದಗಳನ್ನು ಕ್ರಮವಾಗಿ ಜೋಡಿಸುವ ಪ್ರಯತ್ನ ಮಾಡಬಹುದು. ಚಿತ್ರ 20, 'ಏಕಲವ್ಯ" ಅವರ ಸಿದ್ಧಪಡಿಸಿದ ಸೆಟ್ ಅನ್ನು ತೋರಿಸುತ್ತದೆ. ಆದರೆ ನೀವು ನಿಮ್ಮದೇ ಆದ ಒಂದು ಸೆಟ್ಟನ್ನು ಸುಲಭವಾಗಿ ಸಿದ್ಧಪಡಿಸಬಹುದು. ಮಕ್ಕಳು ಸಾಲುಗಳು/ಪದಗಳನ್ನು ಕ್ರಮವಾಗಿ ಜೋಡಿಸುವಾಗ ಅವುಗಳನ್ನು ಉಚ್ಚರಿಸಲು ಪ್ರೋತ್ಸಾಹಿಸಿ.

ನಿಮ್ಮ ತರಗತಿಯನ್ನು ಮುದ್ರಣ ಸಮೃದ್ಧ ಸ್ಥಳವನ್ನಾಗಿ ಹೇಗೆ ಮಾಡಬಹುದು ಎಂಬುದರ ಬಗ್ಗೆ ಈ ಕಿರು ಹೊತ್ತಿಗೆಯು ನಿಮಗೆ ಕೆಲವು ವಾಸ್ತವಿಕ ಕಲ್ಪನೆಗಳನ್ನು ಕೊಟ್ಟಿದೆಯೆಂದು ನಾವು ಭಾವಿಸುತ್ತೇವೆ. ಕಿರಿದಾಗಿ ಆರಂಭಿಸಿ ನಿಧಾನವಾಗಿ ಪ್ರತಿಯೊಂದು ಜಾಗವನ್ನು ನಿರ್ಮಿಸುವುದು ಖಂಡಿತವಾಗಿಯೂ ಸೂಕ್ತವಾದುದು. ಆದರೆ ತರಗತಿಯನ್ನು 'ಅಲಂಕರಿಸುವುದು" ಮತ್ತು ಮುದ್ರಣ-ಸಮೃದ್ಧಗೊಳಿಸುವುದರ ನಡುವಿನ ವ್ಯತ್ಯಾಸವನ್ನು ನೆನಪಿನಲ್ಲಿಡಬೇಕು: ಮುದ್ರಣವನ್ನು ನಿಮ್ಮ ಬೋಧನೆಯಲ್ಲಿ ಬಳಸಬೇಕು. ವಿವಿಧ ಸ್ಥಳಗಳ ನಿರ್ವಹಣೆಗೆ ನಿಮ್ಮ ವಿದ್ಯಾರ್ಥಿಗಳ ಸಹಾಯವನ್ನು ತೆಗೆದುಕೊಳ್ಳಿ! ಪ್ರತಿಯೊಂದು ಸ್ಥಳವನ್ನು ಬಳಸುವುದು ಮತ್ತು ನಿರ್ವಹಿಸುವುದು ಹೇಗೆ ಎಂದು ತೋರಿಸಿಕೊಡಿ. ನಂತರ ಇಬ್ಬರು ಮಕ್ಕಳ ಪ್ರತಿಯೊಂದು ಜೋಡಿಯು ವಾರಕ್ಕೆ ಒಂದು ಬಾರಿಯಂತೆ ಸರದಿಯಲ್ಲಿ ಒಂದೊಂದು ಜಾಗವನ್ನು ನೋಡಿಕೊಳ್ಳಬಹುದು.

## ಆಕರ ಗ್ರಂಥಗಳು:

Abraham, C. (2003). Literacy: Creating a print-rich environment. *Texas Child Care Quarterly, 10-17.* Retrieved from https://www.childcarequarterly.com/pdf/fall03_literacy.pdf

Dyson, A. H. (1988). *Drawing, Talking, and Writing: Rethinking Writing Development.* Occasional Paper No. 3. Berkeley, CA: Centre for the Study of Writing. Retrieved from https://eric.ed.gov/?id=ED292121